Licence No. 60,
licenced to Post without Prepayment

Reg. No. M. 1550,
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ದೇವಯ್ಯನವರು] [ವಾರ್ಷಿಕ ಚಂದಾ ರೂ. 5–0–0.

ಸಂಪುಟ ೩೦ | ತಾರೀಕು ೨೮–೧೨–೧೯೩೧ನೇ ಶುಕ್ರವಾರ | ಸಂಚಿಕೆ ೨೯

-40-

21(4)

ಕೊಡಗು ಕಾಂಗ್ರೆಸ್ಸಿನ ಕುಟಿಲ ರಾಜಕೀಯ.

ಕೊಡಗಿನ ಭವಿಷ್ಯದ ವಿಚಾರದಲ್ಲಿ ಮುಚ್ಚುಮರೆಯ ಮೂಯೂಜಾಲ.

ಓಟಿನ ಚಲಾವಣೆ.

ದೇಶದ ಭವಿಷ್ಯದ ವಿಚಾರ ಈಗ ಇಲ್ಲವೆಂದು ಕಪಟರಾಜಕೀಯಕ್ಕಿಳಿದಿರುವ ಕೊಡಗು ಕಾಂಗ್ರೆಸಿಗೆ ಓಟು ಕೊಟ್ಟರೆ ನಮ್ಮ ಕತ್ತನ್ನ ನಾವು ಕುಯ್ದುಕೊಂಡಂತೆ! ಅದ್ದರಿಂದ ಎಚ್ಚರಿಕೆ! ಎಚ್ಚರಿಕೆ!!

ಕೆಲವೇ ದಿನಗಳಲ್ಲಿ ಹಿಂದೂಸ್ಥಾನದ ವಿಲಿಯೂಂತರ ಪ್ರಾಯಪ್ರಬುದ್ಧರು ತಮಗೆ ದೊರಕಿರುವ ಅಮೂಲ್ಯವಾದ ಓಟನ್ನ ಸ್ವಾತಂತ್ರ್ಯ ಪಡೆದ ನಂತರ ಮೊದಲನೆಯದಾಗಿ ಕೊಡಲಿರುವರು. ಪ್ರಜಾಪ್ರಭುತ್ವದಲ್ಲಿ ಈ ಓಟು ಕೊಡುವ ಹಕ್ಕಿನ ಮಹತ್ವವು ಅಷ್ಟಿಷ್ಟಲ್ಲ. ನಮ್ಮ ದೇಶದಲ್ಲಿ ಅವಿದ್ಯೆ ರಾಜಕೀಯದಲ್ಲಿ ಹೆಚ್ಚಿನ ಮೂಹಿತಿ ಶುಂಬಾ ಜನರಿಗೆ ಇಲ್ಲದಿರುವಿಕೆ, ಅನೇಕ ವಮಂದಾಳುಗಳಲ್ಲಿ ಯೋಗ್ಯವಾಗಿ ಮಹಾಜನರಿಗೆ ಈ ಮಹಕಾರ್ಯವನ್ನು ಸರಿಯಾದ ಮಾರ್ಗದಲ್ಲಿ ನಡೆಸುವಂತೆ ಪ್ರೇರಿಸುವ ವರ್ತನೆ ಇಲ್ಲದಿರುವಿಕೆ, ಮತ್ತು ಅನೇಕ ಬಡ ಜನರು ತಮ್ಮ ಆರ್ಥಿಕ ಬಲಹೀನತೆಯಿಂದ ಬಂಡವಾಳಶಾಹಿಗಳ ಬಗಲಿಗೆ ಒಳಗಾಗಿರುವ ಈ ಕಾರಣಗಳಿಂದ ಅತಿ ಅಮೂಲ್ಯವಾದ ಈ ಓಟಿನ ಹಕ್ಕಿನ ಚಲಾವಣೆ ಸಮಂಜಸವಾಗಿ ನಡೆಯುವುದು ಕಷ್ಟವಾಗಿದೆ. ಆದರೂ ದೇಶದ ಎಲ್ಲಾ ಪಂಗಡಗಳ ಮುಂದಾಳುಗಳು ಪ್ರಜಾಪ್ರಭುತ್ವವು ಅಳಿಯದೆ ಉಳಿಯುವ ಉದ್ದೇಶದಿಂದ ನ್ಯಾಯಮಾರ್ಗದಲ್ಲಿ ವರ್ತಿಸಬೇಕಲ್ಲದೆ ಜನರಿಗೆ ದೇಶದ ಹಿತಾಹಿತಗಳನ್ನು ಹೆಸ್ಸಾಗಿ ತಿಳಿಸಿ ಅವರಿಗೆ ಯುಕ್ತತೋರಿದಂತೆ ಓಟನ್ನು ಕೊಡುವ ಅನುವನ್ನು ಕಲ್ಪಿಸಿಕೊಡುವುದು ಕರ್ತವ್ಯವಾಗಿದೆ.

ಕಾಂಗ್ರೆಸು ಮತ್ತು ಚುನಾವಣೆ.

ಸ್ವರಾಜ್ಯ ಹೋರಾಟದಲ್ಲಿ ಏಕ ದೃಷ್ಟಿಯಿಂದ ಹೋರಾಡಿ, ಅನೇಕ ದುರಂತಗಳನ್ನು ಎದುರಿಸಿ ದೇಶಕ್ಕೆ ರಾಜಕೀಯ ಸ್ವಾತಂತ್ರ್ಯವನ್ನು ಪಡೆದ ಕಾಂಗ್ರೆಸ್ಸು ಪಂಗಡವು ಬರುವ ಚುನಾವಣೆಯಲ್ಲಿ ಹೆಚ್ಚಿನ ಆಸ್ಥೆವಹಿಸಿರುವುದು. ಸ್ವಾತಂತ್ರ್ಯವನ್ನು ಪಡೆದು ಕಳೆದ ನಾಲ್ಕು ವರ್ಷಗಳಿಂದ ದೇಶದ ಆಡಳಿತವನ್ನು ಕಾಂಗ್ರೆಸ್ಸು ನಡೆಸುತ್ತಾ ಬಂದಿರುವದಲ್ಲದೆ ಚುನಾವಣೆಯು ಕಾಲಕ್ಕೂ ಆಡಳಿತೆಯು ತಮ್ಮ ಕೈಯಲ್ಲೇ ಇರಿಸಿಕೊಂಡಿದೆ. ಇದರಿಂದಾಗಿ ಆಡಳಿತೆ ಪಡೆಯುವ ಕಾಂಗ್ರೆಸು ಪಂಗಡಕ್ಕೆ ಚುನಾವಣೆಯಲ್ಲಿ ಪಾತ್ರನಹಿಸಲು ಹೆಚ್ಚಿನ ಸವಲತ್ತುಗಳಿವೆ. ಆದ್ದರಿಂದಲೇ ಕಾಂಗ್ರೆಸು ಮುಂದಾಳುಗಳು ಪ್ರಜಾಪ್ರಭುತ್ವದ ಬೆಳವಣಿಗೆಗೆ ದೃಷ್ಟಿಯಿಂದ ತಮ್ಮ ಎದುರು ಪಂಗಡದವರಿಗೆ ತಕ್ಕ ಸಂದರ್ಭವನ್ನು ಒದಗಿಸಿಕೊಡುತ್ತಿಲ್ಲ ಈ ರೀತಿ ಅಧಿಕಾರದ ದರ್ಪದಿಂದ ಅನ್ಯಾಯ ಮಾರ್ಗವನ್ನು ಹಿಡಿಯಬಾರದು.

ಕಾಂಗ್ರೆಸು ಮತ್ತು ಪ್ರಾಂತಗಳು.

ಇಡೀ ಹಿಂದೂಸ್ಥಾನದ ಮಟ್ಟಿಗೆ ಕಾಂಗ್ರೆಸ್ ಈ ಬಗ್ಗೆ ವಚುನಾವಣೆಯಲ್ಲಿ ಜಯಶೀಲವಾಗಿ ಅಧಿಕಾರದಲ್ಲಿರಬೇಕೆಂದು ದೇಶದ ವಿವಿಧ ದೃಷ್ಟಿಯಿಂದ ತೋರಿಬರುತ್ತದೆ. ಆದರೆ ಕೇಂದ್ರ ಸರಕಾರವು ದಕ್ಷತೆಯಿಂದ ನಡೆಯಬೇಕಾದರೆ ಬಲವಾದ ಎದುರು ಪಾರ್ಟಿಯೊಂದು ಪಾರ್ಲಿಮೆಂಟನ್ನು ಹೊಕ್ಕಬೇಕೆಂಬುದು ಎಲ್ಲರೂ ಒಪ್ಪಿದ ವಿಷಯ. ಇಂಥಹ ಒಂದು ಅವಶ್ಯವಾದ ಎದುರುಪಾರ್ಟಿಯು ಸಂಘಟಿಸಲ್ಪಡುವುದೆಂದು ನಿರೀಕ್ಷಿಸಲಾಗಿದೆ.

ಆದರೆ ಪ್ರಾಂತಗಳ ಮಟ್ಟಿಗೆ ಆಯಾ ಪ್ರಾಂತದ ಹಿತಾಸಕ್ತಿಯನ್ನು ನಡೆಸಲಾಯೋಗ್ಯವೆಂದು ತೋರಿದ ಮುಂದಾಳುಗಳನ್ನು ಕೊಡಿಸಿ ಪಂಗಡಬರುವುದರಲ್ಲಿ ಯಾವ ಸಂದೇಹವೂ ಇಲ್ಲ ಪ್ರಾಂತಗಳ ಆಡಳಿತ ಕ್ರಮದಲ್ಲಿ ರಕ್ಷಣೆ (Defence) ಮತ್ತು ಆಂತರ್ ರಾಷ್ಟ್ರೀಯ ವಿಚಾರಗಳು ಬರುವುದಿಲ್ಲ. ಕೇವಲ ಆಯಾ ಪ್ರಾಂತದ ಒಳಗಿನ ಹಿತದೃಷ್ಟಿಯೇ ಆ ಸರಕಾರದ ಮುಖ್ಯ ಗುರಿಗಾಗಿರುತ್ತದೆ. ಆದ್ದರಿಂದ ಕೆಲವು ಪ್ರಾಂತಗಳಲ್ಲಿ ಅವುಗಳ ಹಿತವನ್ನು ಸಾಧಿಸುವ ಯಾವ ಪಂಗಡ ಆಡಳಿತೆಯನ್ನು ಕೈಕೊಂಡಲ್ಲಿ ದೇಶಕ್ಕೆ ಧಕ್ಕೆ ಬರುವಂತಿಲ್ಲ.

ಕೊಡಗು ಮತ್ತು ಕಾಂಗ್ರೆಸು.

ಈಗ ಬಂದಿರುವ ಚುನಾವಣಾ ಸಮಯದಲ್ಲಿ ನಮ್ಮ ದೇಶವ ಕಾಂಗ್ರೆಸ್ ಪಕ್ಷದಲ್ಲಿ ಯಾವ ಅಭಿಪ್ರಾಯದ ಜನರಿರುವರು ಮತ್ತು ಅವರ ಗುರಿ ಏನೆಂಬುದು ಎಲ್ಲರಿಗೂ ತಿಳಿದಿರುವ ವಿಷಯವಾಗಿದೆ. ನಮ್ಮ ದುರ್ದೈವದಿಂದ ಈ ದೇಶದ ಕಾಂಗ್ರೆಸಿನ ಮೇಲೆ ಜವಾಬ್ದಾರಿ ದೇಶದ ಹಿತಚಿಂತನೆಯನ್ನು ಬಯಸುವ ನಮ್ಮ ಮುಂದಾಳುಗಳಲ್ಲಿರದೆ, ತಮ್ಮ ಸ್ವಾರ್ಥಸಾಧನೆಯು ಗುರಿಯಲ್ಲಿ ವಗ್ನವಾಗಿರುವ ಕರ್ಣಾಟಕ ಕಾಂಗ್ರೆಸಿನ ಹಿಡಿತದಲ್ಲಿ ಬಿದ್ದಿದೆ. ಕರ್ಣಾಟಕ ಕಾಂಗ್ರೆಸ್ ಸಮಿತಿಯ ಬಗಲಿಗೆ ಬಿದ್ದ ನಮ್ಮ ಕೆಲವು ಮುಂದಾಳುಗಳ ಸ್ವಾರ್ಥಸಾಧನೆಯೇ ತಮ್ಮ ಜನರ ಹಿತಸಾಧನೆಯಿಂದ ಆಗದು ಎಂದು ನಂಬಿ ತಮ್ಮ ತಲೆಯ ಮೇಲೆ ಕೂತಿರುವ ಕರ್ಣಾಟಕ ಕಾಂಗ್ರೆಸು ಧುರೀಣರ ಬಂಟರಾಗಿ ತೊಳಲುತ್ತಿದ್ದಾರೆ. ಇದರಿಂದಾಗಿಯೇ ಈ ಕೆಲವು ಮುಂದಾಳುಗಳು ಕೊಡಗಿನ ಹಿತಚಿಂತನೆಯನ್ನು ಏನೊಂದೂ ಗಮನಿಸದೆ ಕರ್ಣಾಟಕ ಏಕೀಕರಣದ ಸಾಧನೆಕ್ಕೆ ತಳಹಾಕುತ್ತಾ ಬಂದರು. ಈ ವರ್ತನೆ ಈ ಪಂಗಡದ ಪ್ರತೀ ವ್ಯಕ್ತಿಯ ಸ್ವಾರ್ಥ ಸಾಧನೆಗೆ ಎಷ್ಟು ಮುಖ್ಯವೋ ಅಷ್ಟೇ ಅಪಾಯಕರವಾದುದು ದೇಶಕ್ಕೆ ಕೇಡು ಎಂಬುದನ್ನು ಅವರು ಮರೆತರು. ಈ ವರ್ತನೆಯಿಂದ ಕೆಲವು ವ್ಯಕ್ತಿಗಳು ಕರ್ಣಾಟಕ ಕಾಂಗ್ರೆಸ್ಸು ಧುರೀಣರ ನಚ್ಚಿನ ಬಂಟರಾಗಿರುವುದಲ್ಲದೆ ಅವರಿಂದ ಅಷ್ಟಿಷ್ಟ ಇಷ್ಟಿಷ್ಟ ಪ್ರಯೋಜನವನ್ನು ಹೊಂದಿದ್ದಾರೆ; ಮುಂದಕ್ಕೆ ದೊಡ್ಡ ಉಪಕಾರವನ್ನು ಪಡೆಯುವ ಆಶೆಯನ್ನು ಇಟ್ಟುಕೊಂಡಿದ್ದಾರೆ

ಕರ್ಣಾಟಕ ಕಾಂಗ್ರೆಸ್ಸಿನ ವರ್ಚಸ್ಸಿನಿಂದ ರಚಿಸಲ್ಪಟ್ಟ ಕೊಡಗು ಕಾಂಗ್ರೆಸಿನ ಕಾರ್ಯಕರ್ತರಲ್ಲಿ ಅನೇಕಾನೇಕ ಬದಲಾವಣೆಗಳು ಆಗಾಗ್ಗೆ ತೋರಿಬರುವುದಕ್ಕೆ ಕಾರಣವೇನು? ಕೇವಲ ಜನರ ಹಾಗೂ ಕೊಡಗಿನ ಹಿತಸಾಧನೆಯೇ ತಮ್ಮ ಗುರಿಯೆಂದು ಭಾವಿಸಿ ಅದಕ್ಕನುಗುಣವಾಗಿ ವರ್ತಿಸಲು ಮರೆತು ಕರ್ಣಾಟಕ ಕಾಂಗ್ರೆಸಿನವರು ಅವರ ಸ್ವಂತ ಹಿತದೃಷ್ಟಿಯಿಂದ ಕೈಕೊಳ್ಳುವ ಎಲ್ಲಾ ಕಾರ್ಯಕ್ರಮಗಳನ್ನು ನಮ್ಮ ಕಾಂಗ್ರೆಸು ಧುರೀಣರಾಗಿ ಯಾವದೊಂದೂ ವಿಮರ್ಶೆ ಮಾಡದೆ ಕೈಕೊಂಡುದೇ ಇದಕ್ಕೆ ಒಂದು ಕಾರಣ. ದೇಶದ ಜನರಿಂದ ತಾವು ಆರಿಸಲ್ಪಡದೆ, ದೇಶದ ಹೊರಗಿನವರಿಂದ ಸ್ಥಾನವನ್ನು ಪಡೆದ ಕೊಡಗು ಕಾಂಗ್ರೆಸಿನ ಈ ಮಹಾವ್ಯಕ್ತಿಗಳು ತಮ್ಮ ಜನರ ಹಿತವನ್ನು ಅಲಕ್ಷಿಸಿರುವುದು ಮಾತ್ರವಲ್ಲ, ಅವರ ಅಭಿಪ್ರಾಯವನ್ನು ತಿಳಿಯುವ ಯಾವದೊಂದು ಪ್ರಯತ್ನವನ್ನೂ ಮಾಡಿಲ್ಲ. ಆದ್ದರಿಂದಲೇ ನಮ್ಮ ಜನರಿಗೆ ಕೊಡಗು ಕಾಂಗ್ರೆಸ್ಸಿನಲ್ಲಿ ವಿಶ್ವಾಸ ಬಹಳ ಮಟ್ಟಿಗೆ ಕಡಿಮೆಯಾಗಿದೆ.

ಕೊಡಗು ಕಾಂಗ್ರೆಸಿನವರ ನೀತಿ.

ಈಗ ಕೆಲವಾರು ವರ್ಷಗಳಿಂದ ಕೊಡಗು ಕಾಂಗ್ರೆಸಿನ ಸರ್ವಾಧಿಕಾರಿಗಳೆನ್ನಿಸಿಕೊಳ್ಳುವ ಅನೇಕ ಮಹಾವ್ಯಕ್ತಿಗಳು ಸಂಘಟಿತರಾಗಿ ಕೊಡಗನ್ನು ಕರ್ಣಾಟಕಕ್ಕೋ ಯಾ ವೈಜಾಗಿಗೊ ಸೇರಿಸಬೇಕೆಂದು ಧರ್ಮವಿಧದ ಯೋಗಿಗಳಂತೆ ಪರಿಶ್ರಮಪಟ್ಟರುವರು. ಇದನ್ನು ಸಾಧಿಸಲು ಕೊಡಗು ಕಾಂಗ್ರೆಸಿನ ಸರ್ವಾಧಿಕಾರಿಗಳು ಕೊಡಗಿನ ಸಂಸ್ಥಾನಿಲನಲ್ಲಿ, ಅನೇಕ ಸಾರ್ವಜನಿಕ ಸಭೆಗಳಲ್ಲಿ, ಹಿಂದೂಸ್ಥಾನದ ಮುಂದಾಳುಗಳನ್ನು ಆಗಾಗ್ಗೆ ಭೇಟಿಮಾಡಿ ಮತ್ತು ಪಾರ್ಲಿಮೆಂಟಿನಲ್ಲಿಯೂ ಸಹ ಇವರ ಮುಖಾಳು ಅನೇಕ ರೀತಿಯಿಂದ ದೇಶದ ಪರ ಪ್ರತಿನಿಧಿಗಳೆಂದು ಹೇಳಿಕೊಂಡು ದೇಶದ ಜನತೆನ್ನೇ ವಂಚಿಸುವ ಕುಟಿಲ ಪ್ರಯತ್ನಗಳನ್ನು ನಡೆಸಿದ್ದು ಎಲ್ಲರಿಗೂ ತಿಳಿದ ವಿಷಯ. ಅಲ್ಲದೆ ಕೊಡಗಿನ ಅಸ್ತಿತ್ವವನ್ನು ಅಳಿಸಿ ಕರ್ಣಾಟಕದಲ್ಲಿ ಯೂ ವೈಜಾಗಿನಲ್ಲಿ ಸಂಯೋಜಿಸಿ ಇದರಿಂದ ಕರ್ಣಾಟಕ ಮುಂದಾಳುಗಳು ತಮ್ಮ ಅಮೂಲಕ್ಕೆ ಕೊಡಗು ಕಾಂಗ್ರೆಸಿಗರು ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳಬಹುದೆಂದು ಈ ಪ್ರಯತ್ನವಾಗಿದೆ.

ರಾಜಕೀಯ ಸುಧಾರಣೆ ಮತ್ತು ಕೊಡಗು ಕಾಂಗ್ರೆಸಿನ ವರ್ತನೆ.

ಕೇವಲ ದೇಶದ ಜನರ ಅಭಿಪ್ರಾಯವನ್ನು ಲೆಕ್ಕಿಸದೆ ಕೊಡಗಿನ ವಿಲೀನವನ್ನು ಸಾಧಿಸಬಹುದೆಂದು ದೃಢವಾಗಿ ನಂಬಿದ ಕೊಡಗು ಕಾಂಗ್ರೆಸ್ಸಿನ ಧುರೀಣರು ಈಗ ಕಂಗೆಟ್ಟಿದ್ದಾರೆ. ರಾಜಕೀಯ ಸುಧಾರಣೆಯೇ ಕೊಡಗು ಪ್ರತ್ಯೇಕವಾಗಿರುವವರೆಗೆ ದೊರೆಯಬಾರದೆಂದು ಇವರು ಸರ್ವಪ್ರಯತ್ನ ಮಾಡಿದ್ದಾರೆ. ಅಲ್ಲದೆ ದೇಶದ ಅಭಿವೃದ್ಧಿಯು ಅನೇಕ ಕಾರ್ಯಗಳಲ್ಲಿ ಸಂಯೋಜನೆಯು ಯೋಧರು ಅತಂಕಗಳನ್ನು ತಂದೊಡ್ಡಿ ದೇಶದ ಜನರ ಅಭಿವೃದ್ಧಿಯನ್ನು ಕಡಿಸಿದ್ದಾರೆ. ಕಾಲೇಜಿನ ಪ್ರಶ್ನೆಯಲ್ಲಿ, ವ್ಯವಸಾಯ ಅಡಾಯ್ತು ತೆರಿಗೆಯನ್ನೂ ಜಾರಿಗೆ ತರುವ ವಿಷಯದಲ್ಲಿ, ಸಂಯೋಜನೆ ಸಾಧ್ಯವಾಗುವಿಕೆಯಿಂದ ಇವರು ಅಡ್ಡ ಬಂದು ಅನೇಕ ತೊಂದರೆಗಳನ್ನುಂಟುಮಾಡಿದ್ದಾರೆ. ಅದರೆ ದೇಶದ ಅದೃಷ್ಟದಿಂದ ಇವರ ದುರಾಶೆಗಳು ಫಲಕಾರಿಯಾಗಿಲ್ಲ.

ಈಗಲಾದರೂ ಅವರ ನೀತಿಯೇನು? ಕೊಡಗಿನ ಸಂಯೋಜನೆಯೇ ತಮ್ಮ ಮಹಾತತ್ವವೆಂದು ಏಕಕಂಠದಿಂದ ಕೂಗಿಕೊಳ್ಳುತ್ತಿದ್ದ ಕೊಡಗು ಕಾಂಗ್ರೆಸಿಗೆ ಈಗ ಅಪ್ರಶ್ನೆ ಮದೇಕಿದೆಯಂತೆ! ಜನರ ಮುಂದೆ ಇಂತಹ ದೇಶದ್ರೋಹಕ ನೀತಿಯನ್ನು ತೆರೆದಿಟ್ಟರೆ ತಮಗೆ ಅಪಜಯವೆಂದು ತಿಳಿದ ಈ ಧುರೀಣರು ಜನರನ್ನು ಸಂಪೂರ್ಣ ಮೋಸಮಾಡುವದಕ್ಕಾಗಿ ದೇಶದ ಭವಿಷ್ಯದ ಪ್ರಶ್ನೆ ಮುಖ್ಯವಲ್ಲವೆಂದು ನಮಗೆ ಯಿಂದ ಸಾರುತ್ತಿದ್ದಾರೆ. ಇದು ದೇಶಕ್ಕೆ ದೊಡ್ಡ ಹಾನಿಯನ್ನುತರುವ ಮಾರ್ಗ. ಇವರ ನೀತಿಯನ್ನು ಆದಿಯಿಂದ ಆಲೋಚಿಸಿದರೆ ಇವರಿಗೆ ನಮ್ಮ ಜನರಲ್ಲಿ ಯಾವದೊಂದು ನಂಬಿಕೆ ಅಥವಾ ಭಕ್ತಿವಿಶ್ವಾಸಗಳಿಲ್ಲವೆಂದು ತಿಳಿಯುತ್ತದೆ ಸ್ವಾರ್ಥಗುರಿಗಳನ್ನು ಅಯೋಗ್ಯ ರೀತಿಯಿಂದ ಸಾಧಿಸಲು ಹೂಡಿದ ಇವರ ಹಿಂದಿನ ಎಲ್ಲಾ ಸಾಧನೆಗಳು ನಿಷ್ಫಲವಾಗಿವೆ. ಈಗಲೂ ಸಹ ಈ ಚುನಾವಣೆಯಲ್ಲಿ ಜಯವನ್ನು ಹೊಂದಿ ದೇಶದ ಅಸ್ತಿತ್ವವನ್ನು ಸೂರೆಗೊಳ್ಳುವ ಉದ್ದೇಶದಿಂದ, ಜನರನ್ನ ಮೋಸಗೊಳಿಸಿಯೇ ಇದನ್ನು ಸಾಧಿಸಬೇಕೆಂದು ಹೊಟ ಈ ಧುರೀಣರು ದೇಶದ ಭವಿಷ್ಯಕ್ಕೂ ಚುನಾವಣೆಗೂ ಸಂಬಂ

ಇಲ್ಲವೆಂದು ಅಪಪ್ರಚಾರ ಮಾಡುತ್ತಿರಿ.

ಂದಿಸ ರಾಜ್ಯಾಡಳಿತ ಯಾರಿಂದ?

ಿದಿಯಿಂದ ಇಂದಿನ ವರೆಗೆ ದೇಶದ ಟವನ್ನು ಸಾಧಿಸಿತ್ತಿರುವ ಕರ್ನಾಟಕ ಂಗ್ರೆಸಿನ ಈ ಯೋಧರು ಫಕ್ಕನೆ ಬ ಾಗಿರುವರೆ? ಅಥವಾ ಜನರನ್ನು ಮೋ ಸಗೊಳಿಸಲು ಸೋಗು ಹಾಕಿರುವರೇ? ಚುನಾವಣೆಯ ನಂತರ ಈ ಕಾಂಗ್ರೆಸು ಧುರೀಣರೇ ಅಡಳಿತೆ ವಹಿಸಬೇಕೆಂದು ಏ ಕೆ ಕಂಗಿಲೊಳ್ಳುತ್ತಾರೆ? ತನ್ನ ಸ್ವಾಂತದ ಹಿತಕ್ಕೆಂದು ದುಡಿಯುವ ಕರ್ನಾಟಕ ಕಾಂ ಗ್ರೆಸಿನಲ್ಲಿ ಹಿಡಿತದಲ್ಲಿ ಬಿದ್ದ ಕೊಡಗು ಕಾಂಗ್ರೆಸಿಗೂ ಅಖಿಲ ಭಾರತ ಕಾಂಗ್ರೆಸಿ ಗೂ ಎತಹ ತಾತ್ವಿಕತೆಯನ್ನು? ಇವರು ಅಡಳಿ ತಕ್ಕೆ ಬಂದರೆ ದೇಶಕ್ಕೆ ಉತ್ತಮ ತರದ ಸ ರ್ಕಾರ ದೊರೆಯುವುದೆಂಬುದಕ್ಕೆ ಯಾವ ಭ ರವಸೆ? ಇವರು ಈ ವರೆಗೆ ದೇಶದ ಉತ್ಪ ತ್ತಿಗೆ ಬೇಕಾಗಿ ಜಯಪ್ರದವಾಗಿ ಯಾವ ಮಾರ್ಗದಲ್ಲಿ ದುಡಿದಿದ್ದಾರೆ? ಅಡಳಿತೆಯ ನ್ನು ದಕ್ಷತೆಯಿಂದ ನಡೆಸಲು ಇವರಿಗಿರು ವ ಯೋಗ್ಯತೆ ಮತ್ತು ಶಕ್ತಿ ಯಾವುದು? ಇವರ ನೀತಿ ಹಿಂದಿನಿಂದ ಇಂದಿನ ವರೆಗೆ ದೇಶವ ಹಾನಿಕಾರಕ ದೃಷ್ಟಿಯೇ ಆಲ್ಲವೆ? ಈಗ ಚುನಾವಣೆಯಲ್ಲಿ ಜಯಹೊಂ ದುವ ದೃಷ್ಟಿಯಿಂದ, ಇಂದಿನ ವರೆಗೆ ಜನ ತೆಯನ್ನು ಲೆಕ್ಕಿಸದ ಈ ಮುಂದಾಳುಗಳು ಈ ಜನರಿಂದಲೇ ತನುಗೆ ಅಧಿಕಾರ ದೊರ ಕಬೇಕೆಂದು ತಿಳಿದು ಜನರ ಮನಸ್ಸಿನಲ್ಲಿ ಕಾಮನಬಿಲ್ಲಿನ ಬಣ್ಣವ ಆಕೆಗಳನ್ನು ತೋ ರಿಸುತ್ತಿರುವರು. ಕರ್ನಾಟಕ ಕಾಂಗ್ರೆ ಸು ತನ್ನನ್ನು ಅಧಿಕಾರ ಸ್ಥಾನಕ್ಕೆ ಪ್ರ ತ್ಯೇಕವಿರುವ ಕೊಡಗಿನಲ್ಲಿ ತರಲಾರದು. ತನ್ನ ದೇಶದ ಜನರೇ ಅಧಿಕಾರ ಕೊಡು ವ ಶಕ್ತಿಯುಳ್ಳವರೆಂದು ಇವರು ಈಗ ಅ ರಿತಿರುವರು. ಆದ್ದರಿಂದಲೇ ಇಂದಿನ ನಾನಾವೇಶಗಳು! ಇವರಿಗೆ ಅಡಳಿತೆ ಕೊಟ್ಟರೂ ಸಹ ಇವರ ಮುಂದಿನ ನೀತಿ ಹಿಂದಿನ ದಾರಿಯನ್ನು ಮರುಕ್ಷಣವೇ ಅ ನುಸರಿಸವಿರಲಾರದು. ಏಕೆಂದರೆ ಇವರಿಗೆ ಸ್ವತಂತ್ರ ರಾಜಕೀಯ ನೀತಿ ಇಲ್ಲ ಇ ವರ ಕರ್ನಾಟಕ ಸ್ವಾಂತೀಕ ಕಾಂಗ್ರೆಸಿನ ಕೈಗೊಂಬೆಗಳು ಆವರ ತಾಳದಂತೆ ಮೇಳ ಕಟ್ಟುವರು.

ಮುಂದಿನ ಅಡಳಿತೆ ಕೊಡಗಿನ ಟೊಳ್ಳು ಕಾಂಗ್ರೆಸಿಗೆ ಬೇಡ.

ಸ್ವರಾಜ್ಯ ಹೋರಾಟದಲ್ಲಿ ಅಖಿಲ ಭಾರತ ಕಾಂಗ್ರೆಸ್ಸು ದೇಶದ ಸ್ವತಂತ್ರ್ಯದ ದೃಷ್ಟಿಯಿಂದ ದಕ್ಷತೆಯಿಂದ ಹೋರಾಡಿ ದೆ. ಸ್ವರಾಜ್ಯವು ದೊರೆತ ನಂತರ, ಅನೇ ಕ ಕಾಂಗ್ರೆಸಿಗರು ಸ್ವಾರ್ಥಸಾಧನೆಗಾಗಿ ಹೆಣಗಾಡುತ್ತಿದ್ದಾರೆ. ಇದರಿಂದ ಕಾಂ ಗ್ರೆಸು ಬಹು ಪಟ್ಟಿಗೆ ಕಟ್ಟಿದೆ; ಮತ್ತೆ ಜನರಿಗೂ ಅವರಲ್ಲಿ ವಿಶ್ವಾಸ ಬಹಳ ಕುಂ ದಿದೆ. ಅದರಲ್ಲೂ ಸ್ವಾಂತೀಕ ಕಾಂಗ್ರೆಸಿ ನಲ್ಲಿ ಸ್ವಾರ್ಥಸಾಧನೆಯು ಯಃಕ್ಷದೇ ನಡೆ ದಿದೆ. ಕೊಡಗು ಕಾಂಗ್ರೆಸು ಈ ಮೋಹಕ್ಕೆ ಸಿಕ್ಕಿದುದಲ್ಲದೆ ಜನತೆಯನ್ನು ಸಂಪೂರ್ಣ ವಂಚಿಸಿ ಅವರ ಹಾನಿಯನ್ನೇ ಸಾಧಿಸಿದ್ದಾ ರೆ. ಕೊಡಗಿನಲ್ಲಿ ಈಗ ಕಾಂಗ್ರೆಸಿನಲ್ಲಿ ಉ ಳಿದಿರುವ ನಾಹಾನ್ಯಕ್ತಿಗಳೆಂದರೆ ಅಧಿಕಾ ರವನ್ನು ಸ್ವೀಕರಿಸಲು ಭಿಕ್ಷೆ ಪಾತ್ರವನ್ನು ಕೈಕೊಂಡ ಕರ್ನಾಟಕ ಕಾಂಗ್ರೆಸಿನ ಬಂಟ ರದೇ ತಂಡ!

ಇಂದು ಹೊಲೆಟ್ಟ ಕಾಂಗ್ರೆಸಿನಿಂದ ಯಾರಾದರೂ ಹೊಗೆ ಬಂದರೆಂದರೆ ಇವ ರು ದೋಶದ್ರೋಹಿಗಳೆಂದು ಕಾಂಗ್ರೆಸು ಬಂಟರು ತಿಳಿದಿರುವರು.. ಆದರೆ ದೇಶದ ಅಭಿವೃದ್ಧಿಯ ನಿರ್ಭ್ರಸಾಧನೆಯ ತಂಡದಿಂ ದ ಆಗದು ಎಂದು ಅರಿತವರು ಆ ತಂಡವ ನ್ನ ಬಿಟ್ಟ ಪ್ರತ್ಯೇಕ ದುಡಿಯುವುದು ಸ ಹಜವಾಗಿದೆ! ಅಂಥವರನ್ನೇ ಜನರು ದೇ ಶದ ಹಿತದೃಷ್ಟಿಯಿಂದ ಆರಿಸುವುದು ಯೋಗ್ಯವಾದುದು. ಕೊಡಗು ಉಳಿದರೆ ನಾಳೆಯಾದರೂ ಪಕ್ಷರು ಯೋಗ್ಯರೀತಿ ಆಡಳಿತ ನಡೆಸಿಯಾರು. ಆದ್ದರಿಂದ ಕೊ ಡಗನ್ನು ಉಳಿಸುವದು ಪ್ರತಿಯೊಬ್ಬನ ಪ್ರ ಥಮ ಕರ್ತವ್ಯ. ಅದಕ್ಕಾಗಿ ಪ್ರತ್ಯೇಕ ವಾದಿಗಳನ್ನು ಅರಿಸುವುದು ಪ್ರತಿಯೊಬ್ಬ ವ ತದಾರನ ಕರ್ತವ್ಯ.

ಕೊಡಗು ಕಾಂಗ್ರೆಸಿನವರಿಗೆ ಒಂದು ಮಾತು.

ನೀವು ಕೊಡಗಿನ ಸಂಯೋಜನೆ ದೇ ಶದ ಹಿತಕ್ಕೆಂದು ದೃಢವಾಗಿ ನಂಬಿದ್ದರೆ ದ ಯವಿಟ್ಟು ಇದರ ವಿಷಯ ನಿಮಗಿಂತ ಕ ಡಮೆ ತಿಳಿವಳಿಕೆಯುಳ್ಳ ಜನತೆಗೆ ತಿಳಿಸಿ ನೀವೆ ಅವರನ್ನು ತಪ್ಪು ದಾರಿಯಿಂದ ಎ ಳೆದು ಸರಿದಾರಿಯಲ್ಲಿ ಬಿಡುವುದು ನಿಮ್ಮ ಕರ್ತವ್ಯ. ಇಂದಿನ ವರೆಗೆ ನೀವು ಸಂ ಯೋಜನೆಯೇ ಸ್ವರ್ಗವೆನ್ನುತ್ತಿದ್ದುದು ನಿ ಮ್ಮ ಕೆಲವು ಮುಂವಾಳುಗಳಿಗೋ ಅಥ ವಾ ದೇಶದ ಸರ್ವಜನರಿಗೋ ಎಂಬುದ ನ್ನು ಜನರಿಗೆ ವಿವರಿಸಲು ನಿಮಗೆ ಹೆದರಿಕೆ ಏಕೆ? ಕೆಲವೆ ಸಾರಿ ನೀವು ಜಯವನ್ನು ಹೊಂದಿರಬಹುದು, ಅದರಿಂದ ನಿಮ್ಮ ಸ್ವಾರ್ಥಸಾಧನೆ ಸ್ವಲ್ಪ ಮಟ್ಟಿಗೆ ಸಾಧಿಸಿರ ಬಹುದು, ಆದರೆ ಜನರಿಂದ ದೇಶಕ್ಕೆ ಅ ಪಾರ ಕೆಟ್ಟದಾಗಿರಲೂಬಹುದು. ಆದ ರೆ ಮೋಸದಿಂದ, ಅನ್ಯಾಯದಿಂದ ಜನರ ಹಿತಚಿಂತಕರೆಂದು ನಟಿಸಿ ಜನರ ಬೆಂಬಲ ಪಡೆಯಲೆತ್ನಿಸುವ ನೀವು ಯಾವಾಗಲೂ ಜಯಪಥದಲ್ಲಿರಲಾರಿರಿ. ಚುನಾವಣೆ ಯಲ್ಲಿ ನೀವು ಅನ್ಯಾಯ ಮಾರ್ಗದಿಂದ, ನಿ ಜಾಂಶವನ್ನು ಜನರಿಗೆ ತಿಳಿಸದೆ ಜಯಶೀಲ ರಾಗಬಹುದು. ಈ ಜಯದ ಫಲವನ್ನು ನಿಮ್ಮ ಕೆಲವರ ಸ್ವಾರ್ಥಕ್ಕಾಗಿ ಉಪ ಯೋಗಿಸಿ ನೀವು ಸುಖಿಗಳಾಗಲೂಬಹು ದು. ಆದರೆ ನಿಮ್ಮ ವರ್ತನೆಯು ಕೊಡ ಗಿನ ಹಾಗು ಕೊಡಗಿನ ಸರ್ವಜನರ ಅ ಧೋಗತಿಯನ್ನು ಒಡನೇ ತರುವರೆಂಬು ದು ನಿಮಗೆ ತಿಳಿದಿರಲಿ.

ಕೊಡಗಿನ ಹೊರಗಿರುವ ನಮಗೆ ಹೊ ರದೇಶಗಳ ಸ್ಥಿತಿ ಚೆನ್ನಾಗಿ ತಿಳಿದಿದೆ. ಹೊ ರಪ್ರಾಂತಗಳೊಡನೆ ಹೋಲಿಸಿದರೆ ಕೊಡ ಗು ಸ್ವರ್ಗಸಮಾನವೆಂಬಂತಿದೆ. ಇಂಥಾ ದೇ ಶಕ್ಕೆ ಈಗ ಸುಧಾರಣೆ ದೊರೆತು ಜನರ ಸೇವೆಯನ್ನು ಪೂರ್ಣ ಮಾಡಲು ಅನು ದೊರೆತಿರುವಾಗ ನಿಮ್ಮ ಈ ಕುಟಿಲ ರಾ ಜ ಕೀಯವೇ? ಕೊಡಗನ್ನು ಪ್ರತ್ಯೇಕವಿಟ್ಟು ಕೊಳ್ಳಬೇಕೆಂಬ ಪಕ್ಷವು ಗಾಂಧೀಜಿಯವ ರ ಗ್ರಾಮಪಂಚಾಯಿತ ಅಡಳಿತೆಯೋಜ ನೆಯನ್ನು ಜಾರಿಗೆ ತರಬೇಕೆಂದು ಕೃಷ್ಣ ಮೆನನ್ ತಿರುವಾಗ ಕಾಂಗ್ರೆಸಿಗರಾದ ನೀವು ಆ ಪ್ರಯತ್ನಕ್ಕೆ ಸಹಾಯ ಮಾಡಬೇಕಿತ್ತು. ಆ ಗುರಿಗಾಗಿ ಎಲ್ಲರನ್ನು ಒಂದುಗೂಡಿಸ ಬೇಕಿತ್ತು. ಬದಲು ಗಾಂಧೀಜಿಯ ಗುರಿ ಯಿಂದ ಜನಸೇವೆಯನ್ನು ಬದಿಗೊತ್ತಿ ಅ ಧಿಕಾರದ ಪೈಪೋಟಿಗೆ ಇಳಿದಿದ್ದೀರಿ. ಗಾಂಧೀಜಿಯ ವರ ತತ್ವಸಿದ್ಧಾಂತಗಳನ್ನು ಮರೆತು ಅಪಪ್ರಚಾರದ ಆಡ್ಡದಾರಿಯನ್ನು, ಅತ್ಯಾವಶ್ಯಕ ವರ್ತನೆಗಳನ್ನು ಕೈಗೊಂ ಡಿದ್ದೀರಿ. ಈ ಕಪಟರಾಜಕೀಯವನ್ನು ಬಿಟ್ಟು ನೀವು ಕೊಡಗಿನ ಭವಿಷ್ಯದ ವಿ ಚಾರದಲ್ಲಿ ನಿಮ್ಮ ಅಭಿಪ್ರಾಯವನ್ನು ಮತ ದಾರರ ಮುಂದೆ ಹೇಳಬೇಕು ಭವಿಷ್ಯ ದ ಪ್ರಶ್ನೆ ಇಲ್ಲವೆಂದು ನೀವು ಹೇಳುವದು ಕೇವಲ ಓಟು ಪಡೆಯುವ ದೃಷ್ಟಿಯಿಂದ ಎಂದು ಸರ್ವರಿಗೆ ಮನವರಿಕೆಯಾಗಿದೆ. ಆದ್ದರಿಂದ ಹೃದಯ ಬಿಚ್ಚಿ ಪರ್ಕಿಸಿರಿ. ಕಾಂಗ್ರೆಸಿನ ಚುನಾತ್ರೆ ತೆರೆದ ಪುಸ್ತಕದಂತಿ ರಬೇಕಲ್ಲದೆ ಗುಪ್ತಸಂಸ್ಥೆಯ ಮೂಯಜಾಲ ವಾಗಿರಬಾರದು.

ಕೊಡಗಿನ ಹೊರಗಿರುವ ಅರು
ಕೊಡವರು.

ಶ್ರೀ ರಾಮಕೃಷ್ಣ ಧರ್ಮಾಸ್ಪತ್ರೆ.

'ಕೊಡಗು'ಪತ್ರಿಕೆಯ ೩೦-೫-೫೧ ರ ಸಂಚಿಕೆಯಲ್ಲಿ ಪ್ರಕಟವಾದ ಪತ್ರವ ನ್ನು ಓದಿ ಸಂತೋಷವಾಯಿತು ನಮ್ಮ ಈ ಔಷಧ ಲಯವನ್ನು ನಡೆಸುವುದರಲ್ಲಿ ತೋರಿಬರುತ್ತಿರುವ ಅನೇಕ ಕುಂದು ಕೊ ರತೆಗಳನ್ನು ಸಾರ್ವ ಜನಿಕರ ಅವಗಾಹನೆ ಗೆ ತರಲು ಈಗ ಒಂದು ಅವಕಾಶ ದೊರೆ ತಂತಾಯಿತು.

ಸ್ಥಳೀಯ ಭಾಷೆಯನ್ನರಿತ ಡಾಕ್ಟರ್ ಇರುವುದಾದರೆ ಅದು ಬಹಳ ಪ್ರಯೋಜ ನಕರವೆಂಬುವುದು ನಿಜ. ಕಳೆದ ನಾಲ್ಕು ವರ್ಷಗಳಿಂದ ಸ್ಥಳೀಯ ಡಾಕ್ಟರ್ ಒಬ್ಬ ರನ್ನು ನೇಮಿಸಲು ಸತತ ಪ್ರಯತ್ನ ನಡೆ ಯುತ್ತಿದ್ದೇವೆ. ಈ ಉದ್ದೇಶದಿಂದ ಸ್ಥ ಳೀಯ ಪತ್ರಿಕೆಗಳಲ್ಲಿ ಪ್ರಕಟಿಸಿದ್ದೆವು. ಸ್ಥ ಳೀಯ ನಿವೃತ್ತರಾದ ಕೆಲವರು ವೈದ್ಯರ ನ್ನೂ, ಖಾಸಗೀ ವೈದ್ಯರನ್ನೂ ವೈಯಕ್ತಿ ಕ ವಾಗಿ ಪ್ರಾರ್ಥಿಸಿದ್ದೆವು. ಒಳ್ಳೆಯ ಸಂಬ ಳ ಕೊಡಲು ನಾವು ಸಿದ್ಧರಿದ್ದರೂ ಯಾರೂ ಮುಂದೆಬರಲಿಲ್ಲ. ತುರ್ತಾ ಪ್ರ ಯತ್ನಪಟ್ಟು ಹೊರಗಿನಿಂದ ಇಬ್ಬರು ಡಾ ಕ್ಟರನ್ನು ನೇಮಿಸಿದೆವು ಆದರೆ ಅವ ರು ತಮ್ಮ ಮಕ್ಕಳ ವಿದ್ಯಾಭ್ಯಾಸದ ಸಲು ವಾಗಿ ಸಂಸಾರವನ್ನು ಕರತರದೆ ತಾವು ಮಾತ್ರ ಏಕಾಂಗಿಯಾಗಿ ಇರುತ್ತಿದ್ದರು. ಆದ್ದರಿಂದ ಆಗಾಗ ತಮ್ಮ ಮನೆಗಳಿಗೆ ಹೋಗಬೇಕಾಗುತ್ತಿದ್ದುದರಿಂದ ಇಲ್ಲಿನ ಕೆ ಲಸಕ್ಕೂ ಅಡಚಣೆಯಾಗುತ್ತಿತ್ತು. ಈಗ ಗ್ರಾಮಾಂತರಗಳಲ್ಲಿ ವಾಸಿಸಲು ಡಾ ಕ್ಟರುಗಳು ಇಷ್ಟಪಡುತ್ತಿಲ್ಲ. ಕೊಡಗು, ಮೈಸೂರು, ನಂದ್ಯಾಸ್ ಪ್ರಾಂತಗಳಲ್ಲಿ ಗ್ರಾಮಾಂತರದ ಆಸ್ಪತ್ರೆಗಳಲ್ಲಿ ಕೆಲಸ ಮಾ ಡಲು ವೈದ್ಯರು ದೊರೆಯದೆ ಇರುವುದ ಕ್ಕೆ ಇದೇ ಕಾರಣವಿರಬಹುದು.

ಇಂಥ ಸಂಸ್ಥಿತಿಯಲ್ಲಿ ನಾವು ಕಳ್ಳ ತ್ತಾ ವಿಶ್ವವಿದ್ಯಾನಿಲಯದ ಪದವೀಧರ ರಾದ ಅನುಭವವುಳ್ಳ ಒಬ್ಬ ವೈದ್ಯರನ್ನು ಕರೆದುಕೊಂಡೆವು. ರಾಮಕೃಷ್ಣ ಸೇವಾ ಸಂಸ್ಥೆಗಳಲ್ಲಿ ಸೇವೆಸಲ್ಲಿಸಬೇಕೆಂಬ ಉಚ್ಚ ಧ್ಯೇಯವುಳ್ಳವರು ಅವರು. ಇಲ್ಲಿಗೆ ಬರು ವುದಕ್ಕೂ ಮುಂಚೆ ವೃಂದಾವನದ ಶ್ರೀ ರಾಮಕೃಷ್ಣ ಮಿಷನ್ ಆಸ್ಪತ್ರೆಯಲ್ಲಿದ್ದರು. ಅಲ್ಲಿನ ಬೇಸಿಗೆಯ ಬಿಸಿಲಿನ ತಾಪ ಹಿಸು ವುದು ಕಷ್ಟವೆಂದೂ ಹೇಳುತ್ತಿದ್ದರು. ಆ ಗ ಅವರನ್ನು ನಮ್ಮಲ್ಲಿಗೆ ಬರಬೇಕೆಂದು ಪ್ರಾರ್ಥಿಸಿಕೊಂಡೆವು. ಅದೇ ಕಾಲದಲ್ಲಿ ಬೇರೊಂದು ಆಸ್ಪತ್ರೆಯಲ್ಲಿ ಉಚಿತವಾಸ ಗೃಹಸೌಕರ್ಯ ನೂರೈವತ್ತರ ರೂ. ೫೦೦ ಸಂಬಳದ ವೇಲೆ ಒಂದು ಹುದ್ದೆ ದೊರೆ ತ್ತಿದ್ದರೂ ಕೂಡ ರಾಮಕೃಷ್ಣ ಸೇವಾಸಂ ಘವನ್ನು ಬಿಡಲು ಇಷ್ಟ ಪಡದೆ ಇಲ್ಲಿಗೆ ಬಂದರು. ಅವರು ಬಂದ ಈ ೨ ತಿಂಗಳ ಳಲ್ಲಿ ೧೩೨೦ಕ್ಕೂ ಜನ ರೋಗಿಗಳು ಉತ್ತಮ ರೀತಿಯ ಚಿಕಿತ್ಸೆಪಡೆದುಫಲ ಹೊಂದ್ದಾರೆ. ಡಾಕ್ಟರು ನೂತನವಾಡಿ ತಿಳಿಯುವುದಕ್ಕಿಂತ ಪೂರ್ವನೂಡಿ ತಿಳಿಯುವುದೇ ಕಷ್ಟವಾಗಿರು ತ್ತದೆ. ಆಲ್ಲದೆ ಬಳಕೆಗೆ ಬೇಕಾದ ಕೆಲವು ಕನ್ನಡ ಪದಗಳನ್ನೂ ಅವರು ತಿ ಳಿದುಕೊಂಡಿದ್ದಾರೆ. ನಮ್ಮಲ್ಲಿ ಯಾರಾ ದರೂ ಒಬ್ಬರು ಅವರ ಸಹಾಯಕ್ಕಾಗಿ ಇದ್ದೇ ಇರುತ್ತೇವೆ. ಕಳೆದ ವರ್ಷ ಈ ಅ ವಧಿಯಲ್ಲಿ ಬಂದ ರೋಗಿಗಳಿಗಿಂತ ಈ ವ ರ್ಷ 1059 ಜನ ಹೆಚ್ಚಾಗಿ ಔಷಧಾಲ ಯದಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಆದರೆ ಈಗಿರುವ ವೈದ್ಯರಅನುಭವ ಮತ್ತು ಜ್ಞಾನ ದ ಪೂರ್ಣ ಪ್ರಯೋಜನವನ್ನು ಪಡೆಯಲಾ ಇನ್ನೂ ನಮಗೆ ಸಾಧ್ಯವಾಗಿಲ್ಲ.

ಸಂದರ್ಭದಲ್ಲಿ ನಮ್ಮ ಹಣಕಾಸಿನ ಪ ರಿಸ್ಥಿತಿಯನ್ನೂ ತಿಳಿಸುವುದು ಅವಶ್ಯಕವಾ ಗಿದೆ. ಸರಕಾರದಿಂದ ದೊರೆಯುತ್ತಿರುವ ಗ್ರ್ಯಾಂಟು ಮತ್ತು ಸಾರ್ವಜನಿಕರ ಸಹಾ ಯದಿಂದ ನಮ್ಮ ಔಷಧಾಲಯವನ್ನು ನ ಡೆಸಲು ಸಾಕಾದಷ್ಟು ಹಣ ದೊರೆತಿಲ್ಲ. ರಾಮಕೃಷ್ಣ ಸಂಘಕ್ಕಿರುವ ಒಳ್ಳೆಯ ಹೆಸ ರಿನಿಂದ ನಮ್ಮ ಈ ಔಷಧಾಲಯವನ್ನು ನಡೆಸುವುದು ಸಾಧ್ಯವಾಗಿದೆ. ೧೯೪೮ ರಲ್ಲಿ ಬೋಂಬಾಯಿ ವರ್ತಕ ಮಹನೀಯ ರಿಂದ ೬೦೦೦ ರೂ ಧನ ಸಹಾಯ ದೊ ರೆಯಿತು. ಅಲ್ಲದೆ ಮದ್ರಾಸು, ಬೋಂಬಾ ಯಿ, ಬರೋಡ, ಕಲ್ಕತ್ತ ಮತ್ತು ಮೈಸೂ ರಿನ ಔಷಧ ವ್ಯಾಪಾರಿಗಳಿಂದ ಪ್ರತಿ ವ ರ್ಷವೂ ಒಂದು ಸಾವಿರಕ್ಕೂ ಹೆಚ್ಚು ಬೆ ಲೆಯ ಔಷಧಗಳು ಉಚಿತವಾಗಿ ಬರುತ್ತ ವೆ. ಇಲ್ಲಿಯೂ ಅನೇಕ ಮಹನೀಯರು ಉದಾರವಾಗಿ ಧನಸಹಾಯ ನೀಡಿದ್ದಾರೆ. ಮಹಾಜನರ ನೆರವಿನಿಂದ ಉಚಿತವಾಗಿ ಒಳ್ಳೆಯ ಔಷಧಿಯನ್ನು ನೀಡುತ್ತಿರುವುದ ಕ್ಕೆ ಸಯೋಜನ ಹೊಂದುತ್ತಿರುವ ರೋ ಗಿಗಳೇ ಸಾಕ್ಷಿ.

ನಾಡಿನ ಮಹನೀಯರೇ, ಯಾರಾದ ರೂ ಈ ಔಷಧಾಲಯಕ್ಕೆ ವೈದ್ಯರಾಗಿ ಸೇ ವೆ ಸಲ್ಲಿಸಲು ಮುಂದೆ ಬರುವುದಾದರೆ ನಿಜವಾಗಿಯೂ ಸಂತೋಷದ ಸಂಗತಿ.

ಸ್ವಾಮಿ ವಿಶ್ವಂಭರಾನಂದ
ಅಧ್ಯಕ್ಷರು, ರಾಮಕೃಷ್ಣ ಶಾರದಾಶ್ರಮ,
ಪೊನ್ನಂಪೇಟೆ.

ಜಿ ನೆಯ ನಮೂನೆ.

[10 (3) ಮತ್ತು 11 ನೆಯ ನಿಬಂಧನೆಗಳು.]

ಉತ್ತರ ಕೊಡಗು ಎಸೆಂಬ್ಲಿ ಕಾನ್‌ಸ್ಟಿಟ್ಯುವೆನ್ಸಿಯ 8 ಚುನಾವಣೆ ಸ್ಥಾನಗಳಿಂದ ಕೊಡಗು ವಿಧಾನ–ಸಭೆಗೆ (Coorg Legislative Assembly) ಚುನಾವಣೆ ನಿಂಧುವಾಗಿರತಕ್ಕ ನಾಮನಿರ್ದೇಶಗಳ (Valid Nominations) ಪಟ್ಟಿ.

ಚುನಾವಣೆಗೆ ಉಮೇದುವಾರರಾಗಿರತಕ್ಕವರ ಅಖೈರು ಪಟ್ಟಿ. (Final List of candidates for Election.)

ಜಂಬ್ರು ನಂ	ಉಮೇದುವಾರನ ಹೆಸರು.	ಉಮೇದುವಾರನ ವಿಳಾಸ		ಸಂಕೇತದ ಗುರುತು*	
ನಂ. ೧ನೆ ಶನಿವಾರಸಂತೆ ಕಾನ್‌ಸ್ಟಿಟ್ಯುವೆನ್ಸಿ					
1	ಶ್ರೀ ಪಿ ಕೆ. ಚನ್ನಯ್ಯ †	.... ಕೋಣಗನಳ್ಳಿ ಗ್ರಾಮ, ಕೊಡ್ಲಿಪೇಟೆ	....	ನೊಗ ಹೇರಿದ ಎರಡು ಎತ್ತುಗಳು	(ಕಾಂ
2	ಶ್ರೀ ಬಿ. ಚಿಕ್ಕ †	.... ನಿಡ್ತ ಗ್ರಾಮ, ಶನಿವಾರಸಂತೆ	....	ಹುಂಜ	(ಪ್ರಿ
3	ಶ್ರೀ ಹೆಚ್. ಎಂ. ಮಲ್ಲಪ್ಪ	.... ಚಿಕ್ಕತೋಳೂರು, ಸೋಮವಾರಪೇಟೆ	....	ತಕ್ಕಡಿ	(ಪ್ರಿ
4	ಶ್ರೀ ಕೆ. ಮಲ್ಲಪ್ಪ, ಬಿ ಎ., ಬಿ. ಎಲ್.,	.... ಎಡ್ವೊಕೇಟ್, ಮಡಿಕೇರಿ	....	ನೊಗ ಹೇರಿದ ಎರಡು ಎತ್ತುಗಳು	(
ನಂ. ೨ನೆ ಸೋಮವಾರಪೇಟೆ ಉತ್ತರ ಕಾನ್‌ಸ್ಟಿಟ್ಯುವೆನ್ಸಿ					
1	ಶ್ರೀ ಹೆಚ್. ಟಿ. ಜಂಗಪ್ಪ	.... ಕಾಫಿ ಪ್ಲಾಂಟರ್, ಪಂಚಾಕ್ಷರಿ ಗ್ರೂಪ್ ಆಫ್ ಎಸ್ಟೇಟ್ಸ್, ಸೋಮವಾರಪೇಟೆ....		ತಕ್ಕಡಿ	(ಸ್ವತಂತ್ರ
2	ಶ್ರೀ ಡಿ. ಹೆಚ್. ದಾಸಪ್ಪ	.... ಕಾಫಿ ಪ್ಲಾಂಟರು, ಸೋಮವಾರಪೇಟೆ	....	ಸೈಕಲ್	(ಸ್ವತಂತ್ರ
3	ಶ್ರೀ ಸಿ. ಕೆ. ಕಾಳಪ್ಪ, ಬಿ. ಎ.,	.... ಕಾಫಿ ಪ್ಲಾಂಟರು, ಸೋಮವಾರಪೇಟೆ	....	ನೊಗ ಹೇರಿದ ಎರಡು ಎತ್ತುಗಳು	(ಕಾಂ)
ನಂ. ೩ನೆ ಸೋಮವಾರಪೇಟೆ ದಕ್ಷಿಣ ಕಾನ್‌ಸ್ಟಿಟ್ಯುವೆನ್ಸಿ					
1	ಶ್ರೀ ಕೆ. ಪಿ. ಹನುಮಂತರಾಜಯ್ಯ	.... ಜವಿನಾರ್ಥರ್ ಹಾರೆಂಗಿ ಗ್ರಾಮ, ಸೋ. ಪೇಟೆ		ನೊಗಹೇರಿದ ಎರಡು ಎತ್ತುಗಳು	(ಕಾಂ)
2	ಶ್ರೀ ಎಚ್. ಟಿ. ಮುತ್ತಣ್ಣ	... ಜವಿನಾರ್ಥರ್ ನೇರುಗಳಲೆ ಗ್ರಾಮ ಸೋ. ಪೇಟೆ		ತಕ್ಕಡಿ	(ಸ್ವತಂತ್ರ)
3	ಶ್ರೀ ಬಿ. ಸಿ. ರುದ್ರಪ್ಪ	.... ಕಾಫಿ ಪ್ಲಾಂಟರು ಬೇಳೂರು, ಸೋ. ಪೇಟೆ		ಬಿಲ್ಲು ಮತ್ತು ಬಾಣ	(ಸ್ವತಂತ್ರ)
ನಂ. ೪ನೆ ಫ್ರೇಜರ್‌ಪೇಟೆ ಕಾನ್‌ಸ್ಟಿಟ್ಯುವೆನ್ಸಿ					
1	ಶ್ರೀ ಜಿ. ಲಿಂಗರಾಜಯ್ಯ	.... ಭೂ ಮೂಲಿಕ ಹೆಬ್ಬಾಲೆ, ಫ್ರೇಜರ್‌ಪೇಟೆ	...	ನೊಗ ಹೇರಿದ ಎರಡು ಎತ್ತುಗಳು	(ಕಾಂ)
2	ಶ್ರೀ ಬಿ. ಸಿ. ಮಲ್ಲಪ್ಪ	.... ಕಾಫಿ ಪ್ಲಾಂಟರು ಬೇಳೂರು, ಸೋ. ಪೇಟೆ		ಹೂಜಿ	(ಸ್ವತಂತ್ರ)
3	ಶ್ರೀ ಎಸ್. ಎ. ರಾಮಶೆಟ್ಟಿ	.... ವ್ಯಾಪಾರಸ್ಥರು, ಫ್ರೇಜರ್‌ಪೇಟೆ	....	ತಕ್ಕಡಿ	(ಸ್ವತಂತ್ರ)
ನಂ. ೫ನೆ ಸುಂಟಿಕೊಪ್ಪ ಕಾನ್‌ಸ್ಟಿಟ್ಯುವೆನ್ಸಿ					
1	ಶ್ರೀ ಬಿ. ಬಸವ †	.... ನಾಕೂರು ಗ್ರಾಮ, ಸುಂಟಿಕೊಪ್ಪ	....	ದೋಣಿ	(ಸ್ವತಂತ್ರ)
2	ಶ್ರೀ ಪಾಂಡಂಡ ಚಂಗಪ್ಪ	... 'ಪಾಂಡಂಡ ಭವನ' ಮಡಿಕೇರಿ	....	ತಕ್ಕಡಿ	(ಸ್ವತಂತ್ರ)
3	ಶ್ರೀ ಪಿ. ಅಕ್ಕ †	.... ಹೆಬ್ಬಾಲೆ ಗ್ರಾಮ, ಫ್ರೇಜರ್‌ಪೇಟೆ,	....	ನೊಗ ಹೇರಿದ ಎರಡು ಎತ್ತುಗಳು	(ಕಾಂ)
4	ಶ್ರೀ ಜಿ. ಯಂ. ಮಂಜುನಾಥಯ್ಯ	... ಕಾಫಿ ಪ್ಲಾಂಟರು, ಸುಂಟಿಕೊಪ್ಪ	....	ನೊಗ ಹೇರಿದ ಎರಡು ಎತ್ತುಗಳು	(ಕಾಂ)
ನಂ. ೬ನೆ ಮಡಿಕೇರಿ ಟೌನ್ ಕಾನ್‌ಸ್ಟಿಟ್ಯುವೆನ್ಸಿ					
1	ಶ್ರೀ ಎನ್. ಆರ್. ಗೋಪಾಲಕೃಷ್ಣ ಬಿ.ಎ, ಬಿ.ಎಲ್,....	ಅಡ್ವೊಕೇಟ್, ಮಡಿಕೇರಿ	....	ತಕ್ಕಡಿ	(ಸ್ವತಂತ್ರ
2	ಶ್ರೀ ಬಿ. ಎಸ್. ಕುಶಾಲಪ್ಪ ಬಿ.ಎ. ಡಿ ಇ (ಲಂಡನ್)....	'ದಿವೇಲಿ' ಮಡಿಕೇರಿ	....	ನೊಗ ಹೇರಿದ ಎರಡು ಎತ್ತುಗಳು	(ಕಾಂ
3	ಡಾ ಬಿ. ಕೆ. ನಂಜುಂಡೇಶ್ವರ	... ಬ್ರಾಮಿನ್‌ವೇಲಿ, ಮಡಿಕೇರಿ	....	ಸೈಕಲು	(ಸ್ವತಂತ್ರ
4	ಶ್ರೀ ಸಿ. ಎಂ. ತಿಮ್ಮಯ್ಯ	.... ಕಾಫಿ ಪ್ಲಾಂಟರು, ಮಡಿಕೇರಿ	....	ಗಾಡಿ	(ಸ್ವತಂತ್ರ
ನಂ. ೭ನೆ ಮೂರ್ನಾಡು ಕಾನ್‌ಸ್ಟಿಟ್ಯುವೆನ್ಸಿ					
1	ಶ್ರೀ ಚೌರಿರ ಮಂದಣ್ಣ ಬಿ. ಎ., ಬಿ. ಎಲ್	.... ಅಡ್ವೋಕೇಟ್, ಮಡಿಕೇರಿ	....	ನೊಗ ಹೇರಿದ ಎರಡು ಎತ್ತುಗಳು	(ಕಾಂ)
2	ಶ್ರೀ ಕೆ. ಎಂ. ಪೊನ್ನಪ್ಪ	.... ವ್ಯಾಪಾರಸ್ಥರು, ಮೂರ್ನಾಡು	...	ತಕ್ಕಡಿ	(ಸ್ವತಂತ್ರ)
ನಂ. ೮ನೆ ಮಡಿಕೇರಿ ನಾಡು ಕಾನ್‌ಸ್ಟಿಟ್ಯುವೆನ್ಸಿ					
1	ಶ್ರೀ ವೈ. ಟಿ. ಅಯ್ಯಪ್ಪ	.... ಗಾಳಿಬೀಡು ಗ್ರಾಮ, ಮಡಿಕೇರಿ	....	ತಕ್ಕಡಿ	(ಸ್ವತಂತ್ರ
2	ಶ್ರೀ ಪಿ. ಡಿ. ಸುಬ್ಬಯ್ಯ	.... ವ್ಯಾಪಾರಸ್ಥರು ಮೋಡರ್ನ್ ಸ್ಟೋರ್ಸು ಮಡಿಕೇರಿ....		ನೊಗ ಹೇರಿದ ಎರಡು ಎತ್ತುಗಳು	(ಕಾಂ

ಸೂಚನೆ.— ** 1. ವೋಟು ಕೊಡುವುದಕ್ಕಾಗಿ ಗೊತ್ತಾಗಿರತಕ್ಕ ಮತ್ತು ಪ್ರತ್ಯೇಕವಾಗಿ ತಿಳಿಸಲಾದ ಪೋಲಿಂಗ್ ಸ್ಟೇಷನ್‌ಗಳಲ್ಲಿ 18–1–52 (ತಾರೀಕು ಆಥವ ತಾರೀಖುಗಳು) 7–30 ಗಂಟೆಯಿಂದ ಪೂರ್ವಾಹ್ನ 12–30 ಗಂಟೆ ವರೆಗೆ ಅಪರಾಹ್ನ 1ರಿಂದ 4–30 ಗಂಟೆಯವರೆಗೆ ವೋಟು ಕೊಡಲು ಅವಕಾಶ ಕೊಡಲಾಗುವುದು.

*** 2. ಉಮೇದುವಾರರುಗಳ ಪಟ್ಟಿಯಲ್ಲಿ ಹೆಸರುಗಳಿಗೆ † ಗುರುತು ಹಾಕಿದ ಉಮೇದ್ವಾರರುಗಳು "ಷೆಡ್ಯೂಲ್ಡ್" ಜಾತಿಗೆ ಸೇರಿದವರು.

ಸ್ಥಳ:—ತಾಲೋಕು ಆಫೀಸು, ಸೋಮವಾರಪೇಟೆ
ತಾರೀಕು 11–12–51

ಜಿ ಸಿ ಕಾರ್ಯಪ್ಪ
ರಿಟರ್ನಿಂಗ್ ಆಫೀಸರ್

ಕೊ ಡ ಗು

ತಾ. ೨೮-೧೨-೫೧ನೇ ಶುಕ್ರವಾರ

ಉಳುವರಿ ಭತ್ತ.

ಕಳೆದ ಮಳೆಗಾಲವು ಪ್ರಾರಂಭ
ದಲ್ಲಿ ಸಕ್ಕ ಮಟ್ಟಿಗೆ ಜೀನ್ನಾಗಿ ನಡೆದ
ದರೂ ಮಧ್ಯದಲ್ಲಿ ನಾಟಿ ಕೆಲಸವು ಬಿರುಸಾ
ಗಿ ನಡೆಯುತ್ತಿದ್ದಾಗ್ಗೆ ಧೀರ್ಘಕಾಲ ಮಳೆ
ನಿಲ್ಲದೆ ಇಲ್ಲದಾಗಿ ರೈತರ ಮನಸಿನಲ್ಲಿ ತುಂ
ಬಿಕೊಳವಳವನ್ನುಂಟುಮಾಡಿತ್ತು. ಆದ
ರೆ ಕೆಲಸವು ಮುಗಿಯುವಷ್ಟರೊಳಗೆ
ಮಳೆಯು ಹೊಡೆಯುಲಾರಂಭಿಸಿ
ಕೆಲವು ಕಡೆಗಳಲ್ಲಿ ನೀರಿಲ್ಲದೆ ಒಣ
ಗಿದ್ದ ಗದ್ದೆಗಳಲ್ಲಿ ಮಳೆ ಬಿದ್ದರೂ
ಜೀನ್ನಾಗಿ ಆಗಲಿಲ್ಲವಾದರೂ ನೀ
ರು ಸಂಪೂರ್ಣ ಒಣಗದೆ ಇದ್ದ
ಗಳಲ್ಲಿ ಬೆಳೆಯು ಉತ್ತಮವಾಗುತ್ತಾ
ಬಂತು. ಹೀಗೆ ಬೆಳೆದ ಬೆಳೆಯನ್ನು ಕೆಡಿ
ಸಿಬಿಡುತ್ತದೋ ಎಂಬಷ್ಟು ಮಳೆಯು ಆಂ
ಕ್ರದಲ್ಲಿ ಬಿಶ್ತು. ಇದರಿಂದ ಕೆಲವಂಗೆ ನಿ
ರಾಶೆಯೂದರೂ ಹಲವರಿಗೆ ಸಮಾಧಾನ
ವುಂಟಾಯಿತು. ಈ ವರ್ಷದ ಬೆಳೆಯು
ಜೀನ್ನಾಗಿದೆ ಎಂಬ ಮಾತು ಅಲ್ಲಲ್ಲಿ ಕೇಳಿಬ
ರುತ್ತಿತ್ತು. ಭತ್ತದ ಬೆಳೆಯು ಒಂದೇ ಸ
ಮನೆ ಬೆಳೆಯುತ್ತಾ ಬಂತು. ಡಿಸೆಂಬರಾ
ಚರಲ್ಲಿ ನಡೆದ ಹುತ್ರಿ ಹಬ್ಬಕ್ಕೆ ಮಂಚಿತ
ವಾಗಿಯೇ ಕೆಲವರು ಸಾಧ್ಯವಿಲ್ಲದೆ ಕಟಾ
ವನ್ನೂ ಮಾಡಬೇಕಾಯಿತು.

ಹುತ್ರಿ ಕಳೆದ ಕೂಡಲೆ ಹಲವರು ಬಿ
ಳಿ ಕಟಾವಿಗೆ ಪ್ರಾರಂಭಿಸಿರುವರು, ಕೆಲ
ವರು ಒಕ್ಕಲನ್ನೂ ಮಾಡಿರುವರು. ಇವ
ರ ಮಾತಿನಂತೆ ಬೆಳೆಯು ನೋಟದಷ್ಟು ಫ
ಸಲು ಇಲ್ಲವೆಂದು ಕೇಳಿಬರುತ್ತದೆ.
ಈ ಮಾತಿನ ಸತ್ಯತೆಯನ್ನು
ನ್ನು ಮುಂದೆ ನೋಡಬೇಕಷ್ಟೆ.
ಪರಿ ಹೇಶದೊಳಗೆ ಬತ್ತ ಬೆಳೆಸಿದವರ
ಯೋಗಕ್ಕಾಗಿ ಇಡಬೇಕಾದ
ಶ್ನನು ಬತ್ತದ ವಿಷಯದಲ್ಲಿ ಬಹಳ
ಜಾಗರೂಕರಾಗಿರಬೇಕು. ಯಾಕೆಂದರೆ
ಬತ್ತ ಹೆಚ್ಚಾಗಬಹುದೆಂಬ ಭಾವನೆಯಿಂ
ದಲೂ, ಬತ್ತದ ಕ್ರಯವು ಸ್ವಲ್ಪ ಮಟ್ಟಿಗೆ
ಏರಿರುವದರಿಂದಲೂ ಒಕ್ಕಲು ಕೆಲಸವು
ನಡೆಯುತ್ತಾ ಇದ್ದ ಹಾಗೆ ಹೆಚ್ಚಿನ ಬತ್ತ
ವು ಮಾರಾಟವಾಗುವ ಸಂಭವವಿದೆ. ಇದ
ರಿಂದ ರೈತರಿಗೂ ಕೂಡ ವರ್ಷಾಂತ್ಯದಲ್ಲಿ
ಊಟಕ್ಕೆ ಇಲ್ಲದ ಸ್ಥಿತಿಯು ಬರಬಹು
ದು. ಆದ ಕಾರಣ ಹೆಚ್ಚಿನ ನಿಕ್ಷೇಪ
ಇಡಲೇ ಬೇಕಾಗುವುದು.

ಈ ದೃಷ್ಟಿಯಿಂದ ಅಧಿಕಾರಿಗಳು
ಇಹು ಎಚ್ಚರಿಕೆಯಿಂದ ಉಳುವರಿ ಬತ್ತ
ವನ್ನು ಅಂದಾಜು ಮಾಡಬೇಕಿದೆ. ಅಂ
ದಾಜು ಮಿತಿ ವಿರುವದಕ್ಕಿಂತ ಸ್ವಲ್ಪ
ಕಡಿಮೆಯಾದರೂ ದೋಷವಿಲ್ಲ. ಈ
ಅಂದಾಜಿನ ಮೇಲೆಯೇ ದೇಶದ ಹೊರಗೆ
ಹೋಗುವ ಬತ್ತದ ಪರಿಮಾಣವನ್ನು
ಕೊಡಗು ಸರಕಾರಕ್ಕೆ ತಿಳಿಸುವುದಾಗಿದೆ.
ಇದರಿಂದ ಈಗ ಎಷ್ಟು ಜಾಗರೂಕತೆ
ವಹಿಸಿದರೂ ಸಾಲದು. ಕಳೆದ
ಸಾಲಿನ ಕೊಪ್ಪಸ್ ದಾಸ್ತಾನು ಬತ್ತ ಇಟ್ಟ
ಮಾಡಿದ ಕೂಪನ್‌ದಾರರಿಗೂ, ಸಾಕಷ್ಟು ಬೆಳೆಯದವರಿಗೂ ಇಷ್ಟರ ವರೆಗೆ ಅನ್ನದ ಕೊರತೆ ಉಂಟಾಗಲಿಲ್ಲ. ಇದೇ ರೀತಿ ಮುಂದಕ್ಕೂ ಸಾಕಷ್ಟು ದಾಸ್ತಾನು ಇಡಲು ಅಧಿಕಾರಿಗಳು ಏರ್ಪಾಡು ಮಾಡುವರಾಗಿ ಆಶಿಸುತ್ತೇವೆ.

ವರ್ತಮಾನ.

ಅಖಿಲ ಕೊಡಗು ಉಪಾಧ್ಯಾಯರ ಸಂಸ್ಥೆಯ ಆಶ್ರಯದಲ್ಲಿ ಶ್ರೀಗಳಾದ ಸಿ. ಎಂ. ರಾಮರಾಯರು ಮತ್ತು ಬಿ. ಎಸ್. ಕೃಷ್ಣಪ್ಪನವರ ಹೆಸರಿನಲ್ಲಿ ಕೊಡುವ ಬಹುಮಾನಗಳನ್ನು ಕೊಡಗಿನ ಕಾಮನ್‌ವೆಲ್ತ್ ಪರೀಕ್ಷೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದ ಶ್ರೀ ಜೋನಿರ ಎಂ ಪೊನ್ನಪ್ಪನವರಿಗೂ, ಮತ್ತು ಎಸ್. ಎಸ್. ಎಲ್. ಎ. ಪರೀಕ್ಷೆಯಲ್ಲಿ ಉಪಾಧ್ಯಾಯರುಗಳ ಮಕ್ಕಳ ಪೈಕಿ ಪ್ರಥಮ ಸ್ಥಾನವನ್ನು ಪಡೆದ ಶ್ರೀ ಕೋಟೆರ ಯಂ. ಭೀಮೈಯ್ಯನವರಿಗೂ ಇದೇ ತಿಂಗಳು ೨೨ನೇ ತಾರೀಕಿನಲ್ಲಿ ನಡೆದ ಸಮ್ಮೇಳನದಲ್ಲಿ ಕೊಡಲಾಗಿದೆ.

ರುದ್ರಗುಪ್ಪೆ ಗ್ರಾಮದ ಸುತ್ತಮುತ್ತಲಿನ ಜನರ ದನಗಳಿಗೆ ತೊಂದರೆಕೊಡುತ್ತಿದ್ದ ಬಾರಿ ಹೆಬ್ಬುಲಿಯೊಂದನ್ನು ಶ್ರೀ. ಕೊಕ್ಕೆರ ಐಯ್ಯಪ್ಪನವರು ತಾ. ೨೦ ರಲ್ಲಿ ಗುಂಡಿಕ್ಕಿ ಕೊಂದಿರುವರು.

ಶ್ರೀ. ಬೇರೆರ ಜಿ ಗಣಪತ್ತಿಯವರ ತಾಯಿ ದಿವಂಗತ ಕುಟ್ಟವ್ವನವರ ಜ್ಞಾಪಕಾರ್ಥವಾಗಿ ಒಂದು ಬೆಳ್ಳಿಯ ಬಟ್ಟಲನ್ನು ಕೊಡಗಿನ ಎಲ್ಲಾ ಹೈಯರ್ ಎಲಿಮೆಂಟರಿ ಶಾಲೆಗಳು ಹಾಕಿ ಪಂದ್ಯಾಟದಲ್ಲಿ ಸ್ಪರ್ಧಿಸಲು ಕೊಟ್ಟಿರುವರು. ಸದರಿ ಪಂದ್ಯಾಟವು ಇದೇ ತಾ. ೧೮-೧೨-೫೧ ರಿಂದ ಕಾಕೋಟುಪರಂಬು ಶಾಲೆಯ ಮೈದಾನದಲ್ಲಿ ಪ್ರಾರಂಭವಾಗಿದೆ.

ಮುಂಬರುವ ಚುನಾವಣೆ ಮುಗಿಯುವ ವರೆಗೆ ಶ್ರೀ. ನೆಲ್ಲಮಕ್ಕಡ ಸುಬ್ಬಯ್ಯನವರು ಚೀಫ್ ಇಲ್‌ಕ್ಟರಲ್ ಆಫೀಸರಾಗಿ ಪೂರ್ತಿ ಕೆಲಸ ಮಾಡಬೇಕಾದುದರಿಂದ ಅಲ್ಲಿಯ ವರೆಗೆ ಶ್ರೀ. ಐಚೆಟ್ಟಿರ ಸುಬ್ಬಯ್ಯನವರನ್ನು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಮತ್ತು ಅಸಿಸ್ಟೆಂಟ್ ಕಮಿಷನರರಾಗಿ ಈ ತಾ ೨೪ರಿಂದ ನೇಮಿಸಲಾಗಿದೆ.

ತಾ ೨೦-೧೨-೫೧ ರಲ್ಲಿ ಸೋಮವಾರಪೇಟೆ ಪ್ರಾದೇಶಿಕ ಸ್ಕೌಟ್ ರ್ಯಾಲಿಯು ನಡೆಯಿತು.

ಕೊಡಗಿನ ೨೧ ನೇ ವಾರ್ಷಿಕ ವಿದ್ಯಾ ಪರಿಷತ್ತು ಈ ತಾ. ೨೨ನೇ ಶನಿವಾರ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ನಡೆಯಿತು. ಯುನೈಟೆಡ್ ನೇಶನ್ಸ್ ಎಸೋಸಿಯೇಶನ್‌ಗಳ ಇಂಡಿಯನ್ ಫೆಡರೇಶನಿನ ಸೆಕ್ರೆಟರಿಯವರಾದ ಶ್ರೀ. ಟಿ ಎ. ಕಾಂತನವರು ಅಧ್ಯಕ್ಷತೆಯನ್ನು ವಹಿಸಿದ್ದರು. ಕೊಡಗಿನ ಅಸಿಸ್ಟೆಂಟ್ ಕಮಿಷನರಾದ ಶ್ರೀ ಐ. ಸಿ. ಸುಬ್ಬಯ್ಯನವರು ಪರಿಷತ್ತನ್ನು ತೆರೆದರು. ಮೈಸೂರು ಮಹಾರಾಜ ಕಾಲೇಜಿನ ಪ್ರೊಫೆಸರ್ ಎಲ್. ಶ್ರೀಕಂಠಯ್ಯನವರೂ, ಚೀಫ್ ಕಮಿಷನರ ಸೆಕ್ರೆಟರಿಯಾದ ಶ್ರೀ. ಕೆ. ಪಿ ಕುಟ್ಟಪ್ಪನವರೂ, ಚಿಕ್ಕ ಮಗಳೂರಿನ ವಯಸ್ಕರ ವಿದ್ಯಾಭ್ಯಾಸದ ಡಿವಿಜನಲ್ ಆಫೀಸರಾದ ಶ್ರೀ. ಪುಲಿಯಂಡ ಜಿ. ಮುತ್ತಪ್ಪನವರೂ ವಿದ್ಯಾಭ್ಯಾಸವನ್ನು ಕುರಿತು ಬೋಧಪ್ರದ ಭಾಷಣಗಳನ್ನು ಮಾಡಿದರು.

ಕಾಂಗ್ರೆಸಿನ ಅಧ್ಯಕ್ಷರಾದ ಪಂಡಿತ ಜವಾಹರ್‌ಲಾಲ್ ನೆಹರುರವರು ಈ ತಾ. ೨೫ ರಲ್ಲಿ ಮಂಗಳೂರಿಗೆ ಬಂದಿದ್ದಾಗ್ಗೆ ಚುನಾವಣಾ ಪ್ರಚಾರಕ್ಕಾಗಿ ಅವರನ್ನು ಕೊಡಗಿಗೂ ಕರತರಲು ಇಲ್ಲಿಯ ಕೆಲವು ಕಾಂಗ್ರೆಸು ಉಪದೇಶವಾರರು ಮಂಗಳೂರಿಗೆ ಹೋಗಿದ್ದರೆಂದೂ, ಆದರೆ ಅವರ ಉದ್ದಿಶ್ಯವು ನೆರವೇರಲಿಲ್ಲವೆಂದೂ ವರ್ತಮಾನ.

ಕೊಡಗಿನ ವಿದ್ಯಾಪರಿಷತ್ತಿಗೆ ಅಧ್ಯಕ್ಷರಾಗಿ ಬಂದಿದ್ದ ಶ್ರೀ. ಟಿ. ಎಲ್. ಕಾಂತಂರವರು ತಾ. ೨೩ರಲ್ಲಿ ಮಡಿಕೇರಿ ಸರ್ಕಾರಿ ಕಾಲೇಜಿನಲ್ಲಿ 'ಸಂಯುಕ್ತ ರಾಷ್ಟ್ರಗಳ ಕೂಟ ಮತ್ತು ಅದರ ಕಾರ್ಯಕಲಾಪಗಳ'ನ್ನು ಕುರಿತು ಉಪನ್ಯಾಸಮಾಡಿದರು.

ತಿದ್ದುಪಡಿ

ಕಳೆದ ವಾರ ದಕ್ಷಿಣ ಕೊಡಗು ರಿಟರ್ನಿಂಗ್ ಆಫೀಸರು ಪ್ರಕಟಿಸಿದ್ದ ಚುನಾವಣಾ, ಉಮೇದುವಾರರ ಪಟ್ಟಿಯಲ್ಲಿ ಕೆ ಅವರು 'ಪ್ರತ್ಯೇಕ ಪಕ್ಷ' ಎಂದು ಇದ್ದದನ್ನು 'ಸ್ವತಂತ್ರ'ವೆಂದು ತಿದ್ದಿಕೊಳ್ಳತಕ್ಕದ್ದು.

ಸಂ.]

ನೆಹರೂರವರ ಹೇಳಿಕೆ.

ಕಾಂಗ್ರೆಸು ಅಧ್ಯಕ್ಷರಾದ ಪಂಡಿತ ನೆಹರುರವರು ಈ ತಾ. ೨೫ ರಲ್ಲಿ ಅಮೃತಸರದಲ್ಲಿ ಭಾಷಣ ಮಾಡುತ್ತಾ ಕಾಂಗ್ರೆಸಿನ ಹೆಸರಿನಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಲು ಎಲ್ಲಾ ಉತ್ತಮವಾದ ಮಹನೀಯರನ್ನು ಆರಿಸಲು ತನಗೆ ಸಾಧ್ಯವಾಗಲಿಲ್ಲವೆಂದು ಒಪ್ಪಿಕೊಂಡದಲ್ಲದೆ, ಕಾಂಗ್ರೆಸ್ಸಿನ ಧ್ಯೇಯಕ್ಕೆ ಸರಿಯಾಗಿ ನಡೆಯದವರನ್ನು ರಾಜಿನಾಮೆ ಕೊಡಿಸಲಾಗದುವುದೆಂದೂ ಸ್ಪಷ್ಟವಾಗಿ ಹೇಳಿದರು.

ಈ ಹೇಳಿಕೆಯು, ಕೊಡಗಿಗೆ ಬಹುಮಟ್ಟಿಗೆ ಅನ್ವಯಿಸುತ್ತದೆ. ಈ ರೀತಿ ಕಾಂಗ್ರೆಸು ಧ್ಯೇಯದ ಅಳತೆಯಾಗುವುದಾದರೆ ಚುನಾವಣೆಯ ಫಂತರ ಕೊಡಗಿನ ಕಾಂಗ್ರೆಸು ಉಮೇದುವಾರರಲ್ಲಿ ಎಷ್ಟು ಜನರು ರಾಜಿನಾಮೆ ಕೊಡಬೇಕಾಗುವದೋ ನೋಡಬೇಕು!

ಅಮ್ಮತ್ತಿನಾಡಿನ ಸಾರ್ವಜನಿಕ ಸಭೆ.

ತಾರೀಕು ೧೧-೧೨-೫೧ ರಲ್ಲಿ ಅಮ್ಮತ್ತಿನಾಡು ಸಾರ್ವಜನಿಕ ಸಭೆಯ ಕಮಿಟಿ ವಿಂಟಿಂಗಿಸಲ್ಲಾದ ತೀರ್ಮಾನಗಳು. ಕಮಿಟಿ ಮೆಂಬರುಗಳು ಹಾಜರಿದ್ದರು.

ಶ್ರೀ. ಬಿ ಎಂ. ಕಾರ್ಯಪ್ಪನವರನ್ನು ಶ್ರೀ. ಎ. ಕೆ. ಭೀಮರಾಯರ ಬದಲು ಪ್ರೆಸಿಡೆಂಟರಾಗಿ ಸರ್ವಸಮ್ಮತದಿಂದ ಆರಿಸಲ್ಪಡಲಾಯಿತು.

ಅಮ್ಮತ್ತಿ ಟೌನಿನಲ್ಲು ಸಾರ್ವಜನಿಕರ ಉಪಯೋಗದ ಬಗ್ಗೆ ಒಂದು ವಾರದ ಆಸ್ಪತ್ರೆ ಮತ್ತು ಬಸ್ಸ್ ಹಿಡಿಯಲು ಕೂರಲಿಕ್ಕಿರುವ ಮನೆ ಕೂಡಿ ಸೂಕ್ಷ್ಮದ ಒಂದು ಕಟ್ಟಡ ಕಟ್ಟುವುದು.'

ಮೇಲ್ಕಂಡ ಕಟ್ಟಡ ಕಟ್ಟಲು ನಾಡಿನ ಪ್ರತಿ ಮಹನೀಯರನ್ನು ಅವರವರು ಮೂರುವ ಬತ್ತ ಗಾಡಿ ೧ಕ್ಕೆ ಒಂದರೂಪಾಯಿ ಮೇರೆ ಚಂದಾ ಕೊಟ್ಟು ಮೇಲಿನ ಕಾರ್ಯಕ್ಕೆ ಪ್ರೋತ್ಸಾಹಕೊಡುವಂತೆ ಅವರನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾಗಿದೆ. ಈ ಚಂದಾ ಪಾವತಿಯೂ ಮಾಡುವ ಕಡೇ ದಿನ ೧೯೫೨ ನೇ ಇಸವಿ ಮಾರ್ಚ್ ತಾರೀಕು ಆಖೈರ್ ಆಗಿರುತ್ತೆ. ಈ ಕಟ್ಟಡವನ್ನು ಕಟ್ಟಲು ಅಮ್ಮತ್ತಿ 'ಬಸವನಗುಡಿ' ಹತ್ತಿರವಿರುವ ಸರ್ವೆ ನಂಬ್ರ ೯೦/೯೧ರ ಪೈಸಾರಿ ಜಾಗವನ್ನು ದರಕಾಸ್ತು ಮೂಲಕ ಕೊಡಿಸಿಕೊಡಬೇಕೆಂದು ಸರ್ಕಾರಕ್ಕೆ ಅರ್ಜಿ ದರಕಾಸ್ತು ಮಾಡುವಂತೆ ಪ್ರೆಸಿಡೆಂಟರವರಿಗೆ ಅಧಿಕಾರ ಕೊಡಲಾಗಿದೆ. ಎಲ್ಲಾ ಕಮಿಟಿಯವರು ೧೯೫೨ನೇ ಇಸವಿ ಜನವರಿ ತಾರೀಕು ೧೫ ರೊಳಗೆ ಮೂರಿಕೆ ಬತ್ತದ ಅಂದಾಜು ಲೆಕ್ಕಗಳನ್ನು ಜಮಾಯಿಸಿ ಲೆಕ್ಕ ಕೊಡುವಂತೆ ತೀರ್ಮಾನಿಸಲಾಗಿದೆ.

ಬಿ. ಎಂ. ಕಾರ್ಯಪ್ಪ.

ಎಚ್ಚರಿಕೆ!

ಕೆಲವು ಕಡೆಗಳಲ್ಲಿ ಈ ಸಂಘದ ವ್ಯಾಪಾರದ ಹೆಸರು (Trade name) ಇದನ್ನು ಅನುಸರಿಸಿ ಜೇನು ಮೂರಾಟ ಮಾಡುತ್ತಿರುವುದು ಗೋಚರಕ್ಕೆ ಬಂದಿರುತ್ತದೆ. ಇದರಿಂದ ಸಂಘದ ವ್ಯಾಪಾರದ ಹೆಸರು, ವ್ಯಾಪಾರದ ಹೆಗ್ಗುರುತು (Trade mark) ಮತ್ತು ವಿವಿಧ ಚೀಟಿಗಳು (Labels) ಧೀರ್ಘ ಕಾಲದಿಂದ ರಿಜಿಸ್ಟರ್ ಆಗಿರುವ ಕಾರಣ ಇವುಗಳನ್ನು ಅನುಸರಿಸುವವರ ಮೇಲೆ ಕ್ರಮ ಜರಗಿಸಲಾದೀತೆಂದು ಸರ್ವಸ್ಥ ಜನರಿಗೆ ತಿಳಿಸಲಾಗಿದೆ.

ಟಿ. ಯಂ. ಕಾರ್ಯಪ್ಪ.
ಕೊಡಗು ಜೇನು ಮತ್ತು ಮೇಣ
ಸಹಕಾರ ಸಂಘ. ಲಿಮಿಟೆಡ್,
ವೀರಾಜಪೇಟೆ.

ಕೊಡಗಿನ ಮತದಾರರಲ್ಲಿ ವಿನಂತಿ.

ಮುಂಬರುವ ಕೇಂದ್ರ ಜನತಾ (ಪಾರ್ಲಿಮೆಂಟ್) ಸಭೆಗೆ ಪ್ರತ್ಯೇಕ ಪಕ್ಷದ ಪರ ನಾನೊಬ್ಬ ಉಮೇದುವಾರನಾಗಿ ನಿಂತಿರುವೆನು. ಕೊಡಗನ್ನು ಪ್ರತ್ಯೇಕವಾಗಿ ಇಟ್ಟುಕೊಂಡು ಈಗ ದೊರೆತಿರುವ ಜವಾಬ್ದಾರಿ ಸರಕಾರವನ್ನು ಇಲ್ಲಿಯ ಸಮಸ್ತ ಜನರ ಹಿತಕ್ಕಾಗಿ ಜಯಪ್ರದವಾಗಿ ನಡೆಸುವ ಸಂಪೂರ್ಣ ವಿಶ್ವಾಸವಿರುವ ನನಗೆ ಕೊಡಗಿನ ಓಟರುಗಳೆಲ್ಲರು ತಮ್ಮ ಅಮೂಲ್ಯವಾದ ಓಟನ್ನು ಕೊಟ್ಟು ಜಯಶೀಲನಾಗಿ ಮಾಡಬೇಕಾಗಿ ವಿನಂತಿ. ನನ್ನ ಚುನಾವಣಾ ನಕ್ಷೆ ತಕಡಿಯಾಗಿದೆ.

ಕೆ. ಟಿ. ಉತ್ತಪ್ಪ.

ಶ್ರೀ ಟಿ. ಎನ್. ಗೋವಿಂದರಾಜ್ಯು
'ಕೊಡಗು' ಏಜೆಂಟರು,

॥ ಪ್ರತ್ಯೇಕ ಪಕ್ಷದವರ ಗಾಂಧಿಯೋಜನೆ. ॥

ಕೊಡಗು ದೇಶವು ಶತಮಾನಗಳಿಂದಲೂ ಪ್ರತ್ಯೇಕ ಪ್ರಾಂತವಾಗಿ ಬದುಕಿ ಬಾಳಿದೆ. ಇಂದೂ ಕೂಡ ಪ್ರತ್ಯೇಕವಿದೆ. ಇದರ ಆಡಳಿತವು ನಿರಂಕುಶ ರೀತಿಯಲ್ಲಿ ನಡೆಯುತ್ತಿದ್ದರೂ ಇಲ್ಲಿಯ ಜನರ ಜೀವನವು ನೆರೆಯ ಯಾವ ಪ್ರಾಂತಗಳ ಜನಜೀವನಕ್ಕೂ ಆದರ್ಶಪ್ರಾಯವಾಗಿದೆ. ವಿದ್ಯೆಯಲ್ಲಿ ಕೊಡಗು ಬೇರೆ ಪ್ರಾಂತಗಳಿಗಿಂಥಾ ಮುಂದಿದೆ. ಪ್ರತಿ ಗ್ರಾಮಕ್ಕೆ ಎಂಬಂತೆ ಶಾಲೆಗಳಿವೆ. ನಾಲ್ಕಾರು ಗ್ರಾಮಗಳಿಗೊಂದರಂತೆ ಆಸ್ಪತ್ರೆಗಳಿವೆ. ಜನರೂ ಕೂಡ ನಾಗರಿಕರಾಗಿದ್ದಾರೆ. ನಿರಂಕುಶ ಆಡಳಿತದ ಕಾಲದ ಆಹಿತವಾತಾವರಣದಲ್ಲೇ ಕೊಡಗು ಈ ರೀತಿ ಬೇರೆ ಪ್ರಾಂತಗಳಿಗಿಂಥಾ ಉತ್ತಮ ಸ್ಥಿತಿಯಲ್ಲಿರುವಾಗ ಪ್ರಜಾಜವಾಬ್ದಾರಿ ಸರಕಾರ ದೊರೆತು ಜನತೆಗೆ ಜವಾಬ್ದಾರರಾದ ಜನರು ಅಧಿಕಾರ ಸೂತ್ರವನ್ನು ಕೊಡಗಿನಲ್ಲಿ ಹಿಡಿದರೆ ಕೊಡಗಿನ ಸ್ಥಿತಿಯನ್ನು ನೂರ್ಮಡಿ ಉತ್ತಮಗೊಳಿಸಿ ಜನರ ಜೀವನವು ಸುಖಮಯವೂ ಶಾಂತಿದಾಯಕವೂ ಆಗುವಂತೆ ಮಾಡುವದು ಸಾಧ್ಯವಿದೆಯೆಂಬ ಭರವಸೆಯು ಕೊಡಗಿನ ಪ್ರತ್ಯೇಕ ಪಕ್ಷಕ್ಕಿದೆ. ಆದ್ದರಿಂದಲೇ ಕೊಡಗನ್ನು ಪ್ರತ್ಯೇಕ ಪ್ರಾಂತವಾಗಿ ಇಟ್ಟುಕೊಳ್ಳಬೇಕೆಂದು ಪಕ್ಷವು ಹೋರಾಡುತ್ತಿದೆ. ಕೊಡಗಿನ ರಾಜಕೀಯದಲ್ಲಿ ಎರಡು ಪಕ್ಷಗಳಾಗಿ ದೇಶದಲ್ಲಿ ಅಶಾಂತಿಯೂ, ಅಯೋಗ್ಯ ವಾತಾವರಣವೂ ಹೆಚ್ಚಿ ಜನಹಿತದ ಕೆಲಸಗಳು ಆಗದ ಪರಿಸ್ಥಿತಿಯನ್ನು ಪ್ರತ್ಯೇಕ ಪಕ್ಷವು ಗಮನಿಸಿದೆ. ಆದ ಕಾರಣವೇ ಕೊಡಗಿನ ಭವಿಷ್ಯದ ಪ್ರಶ್ನೆಯು ತೀರ್ಮಾನವಾಗಿ ಹೋಗಬೇಕೆಂದು ಆ ಪ್ರಶ್ನೆಯನ್ನು ಈಗ ಜನತೆಯ ಮುಂದಿಟ್ಟಿದೆ. ಏಕೆಂದರೆ ಈ ಪ್ರಶ್ನೆ ತೀರ್ಮಾನವಾಗದೆ ಹೋದರೆ ಮುಂದೆ ಆರಿಸಿ ಬರುವ ಶಾಸನ ಸಭೆಯಲ್ಲೂ ಕೂಡ ಈ ಹಿಂದಿನಂತೆ ಪಕ್ಷಗಳ ಹೊಡೆದಾಟವೇ ನಡೆದು ನಮಗೆ ಬಂದಿರುವ ಸುಧಾರಣೆಯು ನಿಷ್ಪ್ರಯೋಜಕವಾಗುವದು.

ಕೊಡಗು ಪ್ರತ್ಯೇಕ ಒಂದು ಪ್ರಾಂತವಾಗಿದ್ದರೆ ಸಾಲದು. ಪ್ರತ್ಯೇಕ ಕೊಡಗು ಇತರ ಪ್ರಾಂತಗಳಿಗೆ ಆದರ್ಶವಾಗುವಂತೆ ಅದರ ಆಡಳಿತ ಸಾಗಬೇಕಲ್ಲದೆ, ಜನಹಿತಕಾರಕ ಕೆಲಸಗಳೂ ಚೆನ್ನಾಗಿ ನಡೆಯಬೇಕು. ಆರ್ಥಾತ್ ಕೊಡಗಿನ ಸರಕಾರವು ರೈತನ ಸರಕಾರವಾಗಬೇಕು. ಈ ದೃಷ್ಟಿಯಿಂದ ಕೊಡಗಿನಲ್ಲಿ ಮಹಾತ್ಮಾಗಾಂಧೀಜಿಯವರ ಗ್ರಾಮ ಆಡಳಿತ ಯೋಜನೆಯನ್ನು ಜಾರಿಗೆ ತರಬೇಕೆಂದು ಪ್ರತ್ಯೇಕ ಪಕ್ಷವು ಪಣತೊಟ್ಟು ನಿಂತಿದೆ. ಗಾಂಧೀಜಿಯವರ ಈ ಆಡಳಿತ ಯೋಜನೆಯ ಪ್ರಕಾರ ಗ್ರಾಮಗಳು ಸ್ವತಂತ್ರ ಆಡಳಿತ ಘಟಕಗಳಾಗುವವು. ರೈತರ ಕೈಗೆ ಆಡಳಿತದ ಸೂತ್ರ ಬರುವದು. ನಿಜವಾದ ಪ್ರಜಾಪ್ರಭುತ್ವವು ಸ್ಥಾಪಿಸಲ್ಪಡುವದು. ಪ್ರತಿ ಗ್ರಾಮದಲ್ಲೂ ಗ್ರಾಮಪಂಚಾಯಿತ ಸಭೆಗಳಾಗಿ ಜನರಿಂದಲೇ ಸರಕಾರ ನಡೆಸಲ್ಪಡುವದು. ಅವರಿಂದ ಈ ಕೆಲಸಗಳು ನಡೆಯುವವು.

(೧) ಗ್ರಾಮದ ರಸ್ತೆ, ಶಾಲೆ, ವಾಚನಾಲಯಗಳ ಸ್ಥಾಪನೆ ಹಾಗೂ ಉಸ್ತುವಾರಿ ನೋಡುವದು:

(೨) ಆಟೋಟಗಳು, ಕಸರತ್ತು ಶಾಲೆಗಳು, ದೇಶೀಯ ಆಟಗಳಿಗೆ ಪ್ರೋತ್ಸಾಹ ಕೊಡುವದು.

(೩) ಎಲ್ಲಾ ಕೋಮಿನವರ ಪ್ರಾಮುಖ್ಯ ಹಬ್ಬಗಳನ್ನು ಸಾಮೂಹಿಕವಾಗಿ ಆಚರಿಸುವದು.

(೪) ವ್ಯವಸಾಯವು ಚೆನ್ನಾಗಿ ನಡೆಯುವಂತೆ ನೀರಾವರಿ ಯೋಜನೆಗಳನ್ನೂ ಒಳ್ಳೆಯ ಬೀಜ ಮತ್ತು ಸುಧಾರಿತ ವ್ಯವಸಾಯ ಹತ್ಯಾರುಗಳನ್ನು ಏರ್ಪಡಿಸುವದು.

(೫) ರೈತರ ಮೇಲಿರುವ ಸಾಲದ ಪರಿಶೀಲನೆ ಮಾಡಿ ಬಡ್ಡಿ ಇಳಿಸುದದು, ಸಾಲ ಕಡಿಮೆ ಮಾಡುವದು, ಕರ್ಮಶೀಲರಿಗೆ ಕಡಿಮೆ ಬಡ್ಡಿಯಲ್ಲಿ ಸಾಲ ಒದಗಿಸುವದು.

(೬) ದನಗಳ ತಳಿಯನ್ನು ಉತ್ತಮಗೊಳಿಸುವದು, ಗೋಶಾಲೆಗಳನ್ನು ಏರ್ಪಾಡಿಸುವದು, ಹಾಲಿನ ಸರಬರಾಯಿಗೆ ಏರ್ಪಾಡು ಮಾಡುವದು.

(೭) ಸಹಕಾರ ತಳಹದಿಯ ಮೇಲೆ ಗ್ರಾಮದಲ್ಲಿ ಉಪಯುಕ್ತ ಕೈಗಾರಿಕೆಗಳನ್ನು ಸ್ಥಾಪಿಸುವದು.

(೮) ಪಂಚಾಯಿತ ಕ್ಷೇತ್ರದಲ್ಲಿ ಒಂದು ಹೆರಿಗೆ ಮನೆ, ಮತ್ತು ಮುಫತ್ತು ವೈದ್ಯಕೀಯ ಸಹಾಯ ದೊರೆಯುವಂತೆ ಏರ್ಪಾಡು ಮಾಡುವದು.

(೯) ಕಡಿಮೆ ಖರ್ಚಿನಲ್ಲಿ ವಿಳಂಬವಿಲ್ಲದೆ ಸಕಲ ಕೋರ್ಟು ವ್ಯವಹಾರಗಳನ್ನು ಗ್ರಾಮಗಳಲ್ಲೇ ತೀರ್ಮಾನಿಸುವ ಏರ್ಪಾಡು ಮಾಡುನದು.

(೧೦) ಗ್ರಾಮದಲ್ಲಿ ಶುಚಿತ್ವ, ಸುಧಾರಿತ ಜೀವನ ಕ್ರಮ ಹೆಚ್ಚುವಂತೆ ಏರ್ಪಡಿಸುವದು.

(೧೧) ಪ್ರೌಢರ ಶಿಕ್ಷಣದ ಏರ್ಪಾಡು ಮಾಡುವದು.

(೧೨) ಜಾತಿ, ಮತ, ಕೋಮುಗಳ ಬೇಧಭಾವವನ್ನು, ತೆಗೆದು ಹಾಕಿ ಎಲ್ಲರಿಗೂ ಜೀವಿಸಲು ಸಮಾನ ಅವಕಾಶ, ಹಕ್ಕು ದೊರೆಯುವಂತೆ ಪ್ರಯತ್ನಿಸುವದು.

ಗಾಂಧೀಜಿಯವರ ಆಡಳಿತ ಕ್ರಮದ ಮೇಲಿನ ವಿಚಾರಗಳಲ್ಲದೆ ಮುಂದೆ ಚುನಾಯಿತರಾಗಿ ಬರುವ ಪ್ರತ್ಯೇಕ ಪಕ್ಷದ ಉಮೇದುವಾರರು ಈ ಕೆಳಗಿನ ವಿಚಾರಗಳಿಗಾಗಿ ಸತತ ದುಡಿಯುವರು.

(೧) ಕೊಡಗಿನಲ್ಲಿ ಭೂಮಿ ಜಾಗ ಇಲ್ಲದವರಿಗೂ, ಹಿಂದುಳಿದವರಿಗೂ ವ್ಯವಸಾಯ ಮಾಡಲು ಯೋಗ್ಯವಾದ ಭೂಮಿ ಬಾಣೆಗಳನ್ನು ಒದಗಿಸುವದು. ಇದಕ್ಕಾಗಿ ಕೊಡಗಿನ ಉತ್ತಮ ಪೈಸಾರಿ ಮತ್ತಿತರ ಜಾಗಗಳನ್ನು ಸ್ವಾಧೀನಪಡಿಸಿಕೊಳ್ಳಲಾಗುವದು

(೨) ಹಿಂದುಳಿದ ಪಂಗಡದವರಿಗೆ ಖಡ್ಡಾಯ ಶಿಕ್ಷಣದ ಏರ್ಪಾಡನ್ನು ಒಡನೆ ಮಾಡಿ ಕ್ರಮಶಃ ಇಡೀ ಕೊಡಗಿಗೆ ಆನ್ವಯಿಸುವದು.

(೩) ಬಡವರಿಗೂ, ಹಿಂದುಳಿದವರಿಗೂ ವಿದ್ಯೆ ಕಲಿಯಲು ಬೇಕಾದ ಪುಸ್ತಕ, ವಸತಿಯ ಏರ್ಪಾಡು ಮಾಡುವದಲ್ಲದೆ ಇತರ ಸಹಾಯವನ್ನು ಒದಗಿಸುವದು.

(೪) ಜಾನುವಾರುಗಳ ಮೇವಿಗೆ ಅಲ್ಲಲ್ಲಿ ಹುಲ್ಲುಗಾವಲುಗಳನ್ನು ಏರ್ಪಡಿಸಿ ಗೋಸಂಪತ್ತನ್ನು ಹೆಚ್ಚಿಸುವ ಪ್ರಯತ್ನ ಮಾಡುವದು.

(೫) ದೇಶದ ಒಳಗೆ ಆಹಾರ ಪದಾರ್ಥಗಳ ಸಾಗಿಸುವಿಕೆಗೆ ಇರುವ ನಿಯಂತ್ರಣವನ್ನು ತೆಗೆದು ಹಾಕುವದು. ಕ್ರಯಕ್ಕೆ ಪಡೆದು ಊಟಮಾಡುವವರಿಗೆ ಕಡಿಮೆ ದರಹಲ್ಲಿ ಸದಾಕಾಲ ಆಹಾರ ಪದಾರ್ಥಗಳು ದೊರೆಯುವಂತೆ ಏರ್ಪಡಿಸಲು ಪ್ರಾಂತೀಕ ರಿಜರ್ವ್‌ಗಳನ್ನಿಟ್ಟು ಆದರಿಂದ ಬರುವ ನಷ್ಟವನ್ನು ಸರಕಾರ ಹೊತ್ತುಕೊಳ್ಳುವದು

(೬) ಹೊರಗಿನಿಂದ ತರಲ್ಪಡುವ ಜೀವನಾವಶ್ಯಕ ವಸ್ತುಗಳ ಬೆಲೆಯನ್ನು ಏರಿಸುವ ಆಸ್ಪದ ಕೊಡದೆ ನ್ಯಾಯವಾದ ಬೆಲೆಗೆ ವಸ್ತುಗಳು ರೈತ ಮಜೂರರಿಗೆ ದೊರೆಯುವಂತೆ ಏರ್ಪಡಿಸುವದು

(೭) ಸಂಪಾಜೆ, ಮುತ್ತುನಾಡು, ಸೂರ್ಲಬಿ, ಎಡವನಾಡು, ಮರೆನಾಡು, ಕುತ್ತುನಾಡು, ಭಾಗಮಂಡ್ಲ, ಶನಿವಾರಸಂತೆ ಮೊದಲಾದ ಹಿಂದುಳಿದ ಭಾಗಗಳ ಅಭಿವೃದ್ಧಿಗೆ ಹೆಚ್ಚಿನ ಗಮನ ಕೊಡುವದು.

(೮) ಹಲವು ಪ್ರಾಮುಖ್ಯ ಗ್ರಾಮಾಂತರ ರಸ್ತೆಗಳನ್ನು ಸರಿಪಡಿಸಿ ಬಸ್‌ಲೈನುಗಳ ಏರ್ಪಾಡು ಮಾಡುವದು.

(೯) ಮದ್ರಾಸ್ ಸರಕಾರದೊಡನೆ ವ್ಯವಹಾರ ನಡೆಸಿ ಬರವೊಳೆ ವಿದ್ಯುಕ್ಛಕ್ತಿ ಯೋಜನೆಯನ್ನು ಜಾರಿಯಲ್ಲಿ ತರಲು ಯತ್ನಿಸುವದು.

(೧೦) ಕೆಲವು ಹೈಯರ್ ಎಲಿಮೆಂಟರಿ ಶಾಲೆಗಳನ್ನು ವ್ಯವಸಾಯ ಆದರ್ಶ ಶಾಲೆಗಳಾಗಿ ಮಾರ್ಪಡಿಸಿ ವಿದ್ಯೆಯ ಜೊತೆಯಲ್ಲಿ ವ್ಯವಸಾಯದ ತರಬೇತನ್ನೂ ಕೊಡುವದು.

(೧೧) ಈಗಿರುವ ಕೈಗಾರಿಕೆ ಶಾಲೆಯನ್ನು ಭದ್ರಪಡಿಸಿ ವಿವಿಧ ಕೈಗಾರಿಕೆಗಳಲ್ಲಿ ತರಬೇತು ಕೊಡುವ ವ್ಯವಸ್ಥೆ ಮಾಡುವದು.

(೧೨) ಬೇತರಿ, ಕೊಟ್ಟಮುಡಿ, ಹದೂರು ಮೊದಲಾದ ಮುಖ್ಯ ಸೇತುವೆಗಳನ್ನು ಕಟ್ಟಿಸುವದು.

(೧೩) ಲಕ್ಷ್ಮಣ ತೀರ್ಥ ಮತ್ತು ಹಾರಂಗಿ ಹೊಳೆಗಳ ನೀರು ವ್ಯವಸಾಯಕ್ಕೆ ದೊರೆಯುವಂತೆ ಬೇಕಾದ ಏರ್ಪಾಡು ಮಾಡುವದು.

(೧೪) ಕೇಂದ್ರದಲ್ಲಿ ಯಾವುದೇ ಸರಕಾರ ಬಂದರೂ, ದೇಶದ ಜನರ ಹಿತದೃಷ್ಟಿಯಿಂದ ಅವರು ಕೈಕೊಳ್ಳುವ ಎಲ್ಲಾ ಯೋಜನೆ ಮತ್ತು ನೀತಿಗಳಲ್ಲಿ ಸಹಕರಿಸುವರ್ತಿಸುವದು.

(೧೫) ಸಾಧ್ಯವಾದಲ್ಲಿ ದೊಡ್ಡ ಕೈಗಾರಿಕೆಗಳನ್ನು ಸರಕಾರದ ಉಸ್ತುವಾರಿಯಲ್ಲಿ ತೆರೆಯುವ ಏರ್ಪಾಡು ಮಾಡುವದು.

(೧೬) ಜನರಿಗೆ ಸರ್ವಸ್ವವಾದ ವ್ಯವಸಾಯ, ರೆಮ್ಯೂ ಮತ್ತು ಸಹಕಾರ ಇಲಾಖೆಗಳು ನಿಜವಾಗಿಯೂ ಜನರ ಹಿತ ಸಾಧಿಸುವ ಇಲಾಖೆಗಳಾಗುವಂತೆ ಪರಿವರ್ತಿಸುವದು.

ಇದೇ ಅಲ್ಲದೆ ಜನರ ಬೇಕು ಬೇಡಿಕೆಗಳನ್ನು ತಿಳಿದುಕೊಂಡು, ಜನತೆಯ ಸೇವೆಯೇ ಸರ್ವಸ್ವವೆಂದು ತಿಳಿದು ವರ್ತಿಸುವ ಸರಕಾರವನ್ನು ಸ್ಥಾಪಿಸಿ ಜನರ ಆಶಯದಂತೆ ವರ್ತಿಸಲು ಕಂಕಣಬದ್ಧವಾಗಿ ಪ್ರತ್ಯೇಕ ಪಕ್ಷವು ನಿಂತಿದೆ. ಈ ಪಕ್ಷಕ್ಕೆ ಕೊಡುವ ಓಟು ಕೊಡಗಿನ ಆಸ್ತಿತ್ವವನ್ನು ಉಳಿಸುವ ಓಟು. ಆದ್ದರಿಂದ ಪ್ರತ್ಯೇಕ ಪಕ್ಷಕ್ಕೆ ನೂರಕ್ಕೆ ನೂರರಂತೆ ಆರಿಸಿಬರುವಂತೆ ಮತದಾರರು ಮತವೀಯುವುದು ಕರ್ತವ್ಯವಾಗಿದೆ.

'ಪ್ರತ್ಯೇಕವಾದಿ'

Announcement.

We have pleasure to announce the appointment of *M/S Chetty Brothers, 'Chowrira Mandanna's House'* Near Rose Bank, Mercara as our Chief Agents for Mysore and Coorg.

Persons desirous of representing our Society as agents and / or Special Agents are requested to contact our above Chief Agents or

THE BOMBAY CO-OPERATIVE INSURANCE SOCIETY LTD.,
Sir Penerozeshan Mehta Road,
Fort, BOMBAY.

ಮುಂಬರುವ ಚುನಾವಣೆಯ ಪ್ರಾಮುಖ್ಯತೆ.

ಕಾಂಗ್ರೆಸ್ಸಿನೆ ಹೆಸರಿಗಾಗಲೀ, ನೆಹರೂರವರ ಕರೆಗಾಗಲಿ, ಕೊಡಗಿನ ಮತದಾರರು ಕಾಂಗ್ರೆಸ್ಸಿನ ಉಮೇದ್ವಾರರನ್ನು ಪ್ರೋತ್ಸಾಹಿಸಲಾಗದು.
ಕೊಡಗಿನ ಮತದಾನವು ದೇಶದ ಭವಿಷ್ಯತ್ತನ್ನು ಕಾಯಬೇಕಿದೆ.

ಲೇಖಕ:—
ಶ್ರೀ ಕೆ. ಬಿ. ಪೊನ್ನಪ್ಪ, ಬೈಗೋಡು.

ಬಂಧನದಲ್ಲಿದ್ದ ಭಾರತವನ್ನು ಬಂಧವಿಮುಕ್ತವಾಗಿ ಮಾಡಲು ಹೋರಾಡಿದ ಸಂಸ್ಥೆಯೇ ಕಾಂಗ್ರೆಸ್. ಕಾಂಗ್ರೆಸ್ ಸಂಸ್ಥೆಯು ಅವಿಶ್ರಾಂತ ದುಡಿಮೆಯ ಫಲವಾಗಿ ಕೊಂಡ ದಿನವೇ ೧೯೪೭ ರ ಆಗಸ್ಟ ಹದಿನೈದು. ಆಂಗ್ಲೇಯರ ಆಡಳಿತ ಅಂದಿಗೆ ಪರಿಪೂರ್ಣಗೊಂಡು ಭವಿಷ್ಯ ಭಾರತದ, ಆಷಾಜ್ಯೋತಿ ನೆಹರುರವರಿಂದ ಆದು ಮೊದಲುಗೊಂಡು ಭಾರತವು ಕರೂ ಸರಕಾರವೆಂದು ಪರಿಗಣಿಸಲ್ಪಟ್ಟಿತು.

ಭಾರತದಲ್ಲಿ ನೆಹರೂ ಸರಕಾರವಾದ ಕಾಂಗ್ರೆಸ್ ಸಂಸ್ಥೆಯಲ್ಲಿದ್ದ ಸರಕಾರ ಆಡಳಿತವು ಧುರೀಣರ ಸ್ವಾರ್ಥದ ಹಾಗೂ ವ್ಯತಿರಿಕ್ತ ವರ್ತನೆಯು ನೆಹರೂರವರ ಗೋಚರಕ್ಕೆ ಬಂದದರಿಂದ ಕಾಂಗ್ರೆಸ್ ಸಂಸ್ಥೆಯಿಂದ ರಾಜಿನಾಮೆ ಕೊಡುವ ಸಂದರ್ಭವೂ ಬಂದೇ ಒದಗಿತ್ತು. ಅವರ ನೇತೃತ್ವದಲ್ಲಿ ಕಾಂಗ್ರೆಸ್ ಸಂಸ್ಥೆಯು ಸುಗಮವಾಗಿ ಸಾಗಲೆಂದು ಪ್ರಕೃತಿಯೇ ಅವಕಾಶ ಒದಗಿಸಿತೋ ಎನ್ನುವಂತೆ ಮೊಜಾ ಕಾಂಗ್ರೆಸ್ ಪ್ರಸಿಡೆಂಟರಾದ ಟೀಂಡಪೆರವರು ರಾಜಿನಾಮೆ ಇತ್ತುದಾಯಿತು. ಇದರಿಂದ ನೆಹರೂವೇ ಕಾಂಗ್ರೆಸ್ ಎಂತಲೂ, ಕಾಂಗ್ರೆಸೇ ನೆಹರೂ ಎಂಬಂತೆ, ಇಂದು ನೆಹರೂರವರು ಕಾಂಗ್ರೆಸ್ಸಿನ ಆಧ್ಯಕ್ಷರಾದರೆಂದು ಊಹಿಸಬಹುದು. ಇದರಿಂದ ಕಾಂಗ್ರೆಸ್ ಸ್ಥಿತಿಯು ಅಂದು ಬಹಳಷ್ಟು ಪಟ್ಟುದರೆ ನೇರವಾದ ಫಲವಾಗಿ ಮುಂದಿಯೂ ಅದರ ಪ್ರಭಾವ ಬೀರುವುದೆನುವುದರಲ್ಲಿ ಯಾವ ಸಂದೇಹವೂ ಇಲ್ಲ.

ಭಾರತದ ಕಾಂಗ್ರೆಸ್ ಸಂಸ್ಥೆಯು ಧ್ಯೇಯ ಹಾಗೂ ತತ್ವ ಒಂದೇ ಆದರೂ, ಕರ್ನಾಟಕದಲ್ಲಿ ಮುಂಬರುವ ಚುನಾವಣೆಗೆ ನಿಲ್ಲುವ ಕಾಂಗ್ರೆಸ್ ಅಭ್ಯರ್ಥಿಗಳ ಮೂಲಯು ಏಕೀ ಕರ್ನಾಟಕವಾಗಬೇಕೆಂದೇ ಆಗಿದೆ. ಕರ್ನಾಟಕ ಕಾಂಗ್ರೆಸ್ಸನ್ನು ಹೊಂದಿಕೊಂಡಿರುವ ಕೊಡಗು ಜಿಲ್ಲಾ ಕಾಂಗ್ರೆಸ್; ಪ್ರಾಂತೀಕ ಕಾಂಗ್ರೆಸಿನ ಪೂರ್ತಿ ಅಭಿಪ್ರಾಯದಂತೆ ಕಾಂಗ್ರೆಸಿನ ಸ್ಥಿತಿಗನುಸರಿಸಿ ನಡೆಯಲೇ ಬೇಕಾಗಿರುವುದು. ಇದರಿಂದ ಇಂದಿನ ಕೊಡಗಿನ ಕಾಂಗ್ರೆಸ್ ಉಮೇದುವಾರರು ನೇರವಾಗಿ ಕರ್ನಾಟಕ ಪ್ರಾಂತ್ಯವನ್ನು ರಚಿಸುವಪರೇ ಎಂಬುದರಿ ತಪ್ಪಾಗಲಾರದು.

ಭಾರತ ರಾಜ್ಯಪುನರ್ನಾ ಸಭೆಯು ಮಾಡಿದ ಕಾನೂನು ಮೇರೆ "ಸಿ" ಪ್ರಾಂತ್ಯಗಳ ಶಾಸನ ಸಭೆಯುವರೊಡನೆ ಸಂಯೋಜನೆ ಕೇರ್ಮಾಸ ಪಡೆದು, ಆದಕ್ಕಾಗಿ ಮತದಾನ ಮತ್ತೊಮ್ಮೆ ಪಡೆಯಬೇಕೆನೇ ನೇರವಾಗಿ ಸಂಯೋಜನೆಗೊಳಿಸುವ ಸರ್ವಹಕ್ಕು ಮುಂದೆ ಆರಿಸಿ ಬರುವ ಸಭೆಗೆ ಇರುವುದರಿಂದ ಇಂದಿನ ಕೊಡಗು ಕಾಂಗ್ರೆಸಿಗರು ಮುಂದಿನ ಚುನಾವಣೆಯಲ್ಲಿ ಗೆದ್ದು ಬಂದರೆ, ಕೊಡಗು ಯೂನಿಯ ಅಸ್ತಂಕವಿಲ್ಲದೆ ಇತರ ಒಪ್ಪುವ ಪ್ರಾಂತ್ಯದೊಡನೆ ಸಂಯೋಜನೆಯಾಗಬಹುದೆಂಬ ಮೇಲ್ಕಂಡ ಆಧಾರಗಳಿಂದ ದೃಢವಾಗಿ ಹೇಳಬಹುದು.

ಈ ಸಂದರ್ಭದಲ್ಲಿ ಕೊಡಗು ಪ್ರತ್ಯೇಕವಿರಬೇಕೋ ಯಾ ಸಂಯೋಜನೆಯಾಗಬೇಕೋ ಎಂಬುವುದೇ ಪ್ರಸ್ತುತ ಮತದಾರರ ಮುಂದಿರುವ ಮುಖ್ಯ ಸಮಸ್ಯೆಯಾಗಿದೆ. ಕೊಡಗು ಕೆಲವು ವರ್ಷದ ವರೆಗೆ ಪ್ರತ್ಯೇಕವಿದ್ದು ಅಬೊಂದು ಪರಿಶೋಧನಾಕ್ಷೇತ್ರವಾಗಿ ಇರುವುದರಿಂದ ಆತಂಕವೇನು? ಈಗಲೇ ಸಂಯೋಜನೆಯಾಗುವುದರಿಂದ ಆಗುವಲಾಭವೇನು? ಈಗಲೇ ಸಂಯೋಜನೆಯಾದಲ್ಲಿ ವಿದ್ಯುಚ್ಛಕ್ತಿ ಬೆಳಗಬಹುದೆಂದೊ, ರೈಲ್ವೆಗಾಡಿ ಉರುಳಾಡಬಹುದೆಂದೋ, ಶೇಕಡ ಮೂನ್ನೂರಷ್ಟು ಬೆಳೆ ಬೆಳೆಸಬಹುದೆಂದೋ, ಕೈಗಾರಿಕೆ ಹಾಗೂ ಕಾರ್ಖಾನೆಗಳನ್ನು ಸ್ವಪ್ನದಲ್ಲಿಯೇ ನಿರ್ಮಿಸಬಹುದೆಂದೋ, ನೌಕರಿಯ ಹೆಣಗಾಟದ ನಿವಾರಣೆಯಾಗಬಹುದೆಂದೋ? ಇವೆಲ್ಲ ಕೊಡಗಿನ ಇಂದಿನ ಕಾಂಗ್ರೆಸ್ ಸಂಸ್ಥೆಯವರು ಯೋಚಿಸುವಷ್ಟು ಸುಲಭವಲ್ಲ. ಅಲ್ಲದೆ ಕೊಡಗನ್ನು ಸಂಯೋಜಿಸಲು ಇಚ್ಛಿಸುವ 'ಎ' ಯೂ 'ಬಿ' ಪ್ರಾಂತ್ಯಗಳ ಅಂತಸ್ತು ಆ ಮಟ್ಟದಲ್ಲಿಲ್ಲ. ಕೊಡಗಿನ ಕಾಂಗ್ರೆಸ್ ಸಂಯೋಜನವಾದಿಗಳಾದ ಉಮೇದುವಾರರು ಕೊಡುವ ಭರವಸೆಗಳನ್ನು ನಡೆಸಿ ಕೊಡಲು ಅಷ್ಟು ಸುಲಭ ಸಾಧ್ಯವೂ ಅಲ್ಲ. ಏಕೆಂದರೆ ಭಾಷಾವಾರು ಪ್ರಾಂತ್ಯಗಳ ಮೇರೆಗಳಲ್ಲಿ ಉಂಟಾಗಬಹುದಾದ ಗೊಂದಲವು ಹಿಂದೂ-ಪಾಕಿ ಸ್ಥಾನಗಳ ಮೇರೆಗಳಲ್ಲಿ ನಡೆಯುತ್ತಲಿರುವ ಗೊಂದಲಗಳನ್ನು ಮೀರಬಹುದು. ಮುಂದಿನ ಕರ್ನಾಟಕ ಪ್ರಾಂತ್ಯದಲ್ಲಿ ಉಳುವರಿಗೆ ಆಗ ಬಹುದೆಂದು ಕಂದಾಜು ಮಾಡಿರುವ ಇಪ್ಪತ್ತೆಂಟಾಲ್ಕು ಲಕ್ಷ ರೂಪಾಯಿಗಳಲ್ಲಿ ಹದಿನಾಲ್ಕಾಲ್ಕು ಲಕ್ಷ ಕೊಡಗಿನದೇ ಆಗುವದಂತೆ. ಈ ಉಳುವರಿ ಪೊಜಲಗು ಕರ್ನಾಟಕದ ಎಲ್ಲಾ ಭಾಗಗಳಿಗೆ ದಾಮಾಷಾಯ ರೂಪದಲ್ಲಿ ಒಡಾವಣೆಯಾಗುವುದೇ ವಿನಹ ಕೊಡಗಿಗೆ ಮಾತ್ರ ದೊರೆಯಲಾರದು. ಇಂದಿನ ಕೊಡಗಿನ ರೈತರ ಸ್ಥಿತಿಗೆ ಕರ್ನಾಟಕ ಪ್ರಾಂತ್ಯದ ರೈತರ ಸ್ಥಿತಿಯನ್ನು ಏರಿಜೇಕಾದರೆ ಹಲವು ವರ್ಷ ಬೇಕಾಗಬಹುದು. ಆ ಅವಧಿಯಂತನಕ ಕೊಡಗಿನ ರೈತರ ಪರಿಸ್ಥಿತಿ ಏನಾಗುವದೆಂಬುದನ್ನು ಪ್ರತಿಯೊಬ್ಬ ಮತದಾರನೂ ಆಲೋಚಿಸಬೇಕಾಗಿದೆ. ಹಿಂದುಸ್ತಾನವು ತಜ್ಞರನ್ನು ಪರದೇಶಗಳಿಂದ ತರಿಸಿಕೊಳ್ಳುವಂತೆ ಕೊಡಗಿನ ಯುವರಿಗೆ ಎಲ್ಲೆಡೆಯಲ್ಲಿಯೂ ಔದ್ಯೋಗಿಕ ವಿಚಾರದಲ್ಲಿ ಸ್ಥಾನವಿದೆ. ಸಮಕಾಲಾದ ದೃಷ್ಟಿಯಿಂದ ಅದಾಯ ತೆರಿಗೆಯನ್ನು ನಿರ್ಧರಿಸಿರುವುದರಿಂದ ಕೊಡಗಿನ ಆರ್ಥಿಕ ಅಭಿವೃದ್ಧಿಯು ಇನ್ನೂ ಹೆಚ್ಚಲು ಅನುವಿದೆ. ಈ ದೃಷ್ಟಿಯಿಂದ ಕೊಡಗು ಪ್ರತ್ಯೇಕವಾಗಿ ಉಳಕೊಂಡಲ್ಲಿ, ಪ್ರತ್ಯೇಕವಾದಿ ಉಮೇದುವಾರರು ಮುಂದೆ ಹೇಗೆ ಆಡಳಿತವನ್ನು ನಡೆಸುತ್ತಾರೆಂಬುದನ್ನು ಮತದಾರರೂ ಗಮನಿಸತಕ್ಕ ವಿಷಯವಾಗಿದೆ. "ಸಿ" ಪ್ರಾಂತ್ಯದ ಅಧಿಕಾರಿಯನ್ನು ಪರಸ್ಪರ ವರ್ಗಾಯಿಸಲು ಅನುವಿರುವುದರಿಂದಲೂ, ಅಧಿಕಾರಯುತವಾದ ಮಂತ್ರಿ ಮಂಡಲವು ರಚಿತವಾಗುವುದರಿಂದಲೂ, ಪ್ರತ್ಯೇಕವಿದ್ದರೂ, ಯಾವ ಪ್ರಬಲ ಅಧಿಕಾರಿಗೂ, ದರ್ಪ ನಡೆಸಲು ಸ್ಥಾನವಿಲ್ಲ ಕೊಡಗಿನ ಹಳೇ ಕಾಂಗ್ರೆಸಿಗರನೇಕರು ಕೊಡಗಿನ ಪ್ರತ್ಯೇಕತನದ ಹೋರಾಟಕ್ಕಾಗಿ ಕಾಂಗ್ರೆಸಿಗೆ ರಾಜಿನಾಮೆ ಇತ್ತಿರುವುದರಿಂದ ಅವರು ಜಯಶೀಲರಾದರೆ ಮತ್ತೊಮ್ಮೆ ಕಾಂಗ್ರೆಸಿಗರಾಗಿ ಕೊಡಗು ತನ್ನದೇ ಆದ ಪ್ರಾಂತೀಕ ಕಾಂಗ್ರೆಸ್ ಪಕ್ಷ ಕವಿಟಯನ್ನು ಏರ್ಪಡಿಸಿ ಕರ್ನಾಟಕ ಪ್ರಾಂತೀಕ ಕಾಂಗ್ರೆಸಿನ ಅಧೀನತೆಯನ್ನು ತಪ್ಪಿಸಿಕೊಳ್ಳಬಹುದು. ಕೊಡಗು ತನ್ನ ನೈಸರ್ಗಿಕ ಹಾಗೂ, ಸಾಂಸ್ಕೃತಿಕ ಸ್ಥಿತಿಗಳಲ್ಲಿ ಎಂದೂ ಪರಾವಲಂಬಿಯಾಗಿರುವ ಅವಶ್ಯಕತೆ ಇಲ್ಲ ತನ್ನದೇ ಆದ ನೈಪುಣ್ಯತೆಯನ್ನು ಆದು ಭರತಖಂಡದಲ್ಲಿ, ಏಕೆ! ವಿಶ್ವದಲ್ಲೇ ತನ್ನ ನೈಜಪ್ರಭಾವದಿಂದ ಬೀರಿದೆ. ಅಂತಹ ನೈಪುಣ್ಯತೆ ಹಾಗೂ ಪ್ರಭಾವವನ್ನು ಕೊಡಗಿನವರು ಕಳಕೊಳ್ಳಬಡಂತೆ ಕಾವೇರಿ ಮಾತೆಯು ಬೆಂಬಲವಿರಲಿ. ಕೊಡಗು ತನ್ನದು ಎನ್ನುವ ಹಂಬಲವೂ, ಇಲ್ಲಿರುವ ಪ್ರತಿಯೋರ್ವರಲ್ಲಿ ಬೇರೂರಲಿ.

ಸ್ವೇಚ್ಛಕ್ಕಾಗಲಿ ನೇಟಸ್ಥಿತಿಗಾಗಲೀ ಯಾ ಬೇರಿ ಯಾವುದೇ ವಿಧದ ಸಹಾಯವನ್ನು ನೆನಸಿಯೂಗಲಿ, ಮತದಾರರು ತಮ್ಮ ಮತವನ್ನು ಮಾರಿಕೊಳ್ಳದೆ ದೇಶಹಿತಾತ್ಸಲ್ಯವನ್ನೇ ಮೂಲಗುರಿಯಾಗಿಟ್ಟುಕೊಂಡು ಮತದಾನದ ಸದುಪಯೋಗಪಡಿಸುವಂತಾಗಲಿ.

ಕೊಡಗನ್ನು ಪ್ರತ್ಯೇಕವಿರಿಸಬೇಕೆಂಬುದು ಇಲ್ಲಿಯವರ ಸ್ವಾರ್ಥತೆ ಎಂದೆನ್ನುವದಾದರೆ ಏಕೀಕರಣಾಟಕವಾಗಬೇಕೆಂಬುದು ಕನ್ನಡಿಗರ ಹಾಗೂ ಇಲ್ಲಿಯ ಸಂಯೋಜನೆವಾದಿಗಳ ಸ್ವಾರ್ಥತೆಯಲ್ಲವೇನೇ? ಕೊಡಗಿನ ಇಂದಿನ ಕಾಂಗ್ರೆಸಿಗರು ಸ್ವಾರ್ಥಿಗಳಲ್ಲವೆಂದು ಹೇಳುವುದಾದರೆ ಕೊಡಗಿನ ಮಹಮ್ಮದಿಯರಾಗಲೀ ಕ್ರೈಸ್ತರಿಗಾಗಲೀ ಸ್ಥಾನವನ್ನು ಇಡದೆ ತಮ್ಮ ಪಕ್ಷಕ್ಕೇಮಾತಲಾಗಿಟ್ಟುಕೊಂಡದ್ದಕ್ಕೆ ಏನೆನ್ನಬೇಕ? ಈ ಪರಿಸ್ಥಿತಿಯಲ್ಲಿ ಕೊಡಗಿನ ಇಂದಿನ ಕಾಂಗ್ರೆಸ್ ಉಮೇದುವಾರರಾದ, ಸಂಯೋಜನವಾದಿಗಳಿಗೆ ಅಪಜಯವಾಗುವುದೆಂಬುವುದರಲ್ಲಿ ಕೊಡಗಿನ ಯಾವ ಮತದಾನಿಗೂ ಸಂದೇಹವಿಲ್ಲ.

JEEP FOR SALE.

In excellent condition recently over-hauled. new parts, newhood with side curtains and new battery, two new and four old tyres. Mileage 20 per gallon. Prize Rs. 6,000/-.

Apply to-

I. C. BOPIAH.
MANAGER,
Mylemoney Estate,
Joladalu Post,
Chickamagalur.

—೦೦೦—

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1931ರಲ್ಲಿ ಸ್ಥಾಪಿಸಲಾಗಿದೆ

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,05,500
ಕ್ಷೇಮನಿಧಿ	ರೂ.	59,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸರಕಾರಿ ಬಂಧಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೆಸಿಟಿ, ವಾರ್ಡನ್ಸ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಂತಿನ ಸಾಲದ ಶಾಖೆಯ ಮೂಲಕ ದೀರ್ಘ ಕಂತಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ವಿಷಯವನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಕಾರ್ಯದರ್ಶಿ.
ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಮೆಜಾಕ್ಟರ್.

Edited Printed and Published by P. I. Belliappa at 'Kodagu' Press, Mercara, for 'Kodagu Ltd.

ಕೊಡಗು 'ಕಾಂಗ್ರೆಸ್ಸಿ'ನವರ ಪ್ರಚಾರ ಕ್ರಮ.

ನೇಗಿಲಿಲ್ಲದ ಎತ್ತು ಹೊಲ ಉಳಲಾರದು.

[ಬರೆದು ಬಂದದ್ದು]

ಅಖಿಲ ಭಾರತ ಕಾಂಗ್ರೆಸ್ಸು ಇಂದು ಅಧಿಕಾರದಲ್ಲಿರುವ ಸಂಸ್ಥೆಯಾಗಿದೆ. ಇಂದು ಚುನಾವಣೆ ಹತ್ತಿರ ಬಂದಿರುವಾಗ ದೇಶದ ವಿವಿಧ ಪಕ್ಷಗಳು ತಮ್ಮ ತಮ್ಮ ತತ್ವ ಧೋರಣೆಗಳ ಪ್ರಚಾರ ಮಾಡುತ್ತಿರುವಂತೆ ಕಾಂಗ್ರೆಸ್ಸು ಮಾಡುತ್ತಿಲ್ಲ. ಅದಕ್ಕೆ ಎಲ್ಲಾ ಪಕ್ಷಗಳಂತೆ ಕಾಂಗ್ರೆಸ್ಸಲ್ಲ ಆದು ದೇಶದ ಆಡಳಿತ ನಡೆಸುತ್ತಿರುವ ಸಂಸ್ಥೆಯೂದ ಕಾರಣ ಅದು ತನ್ನ ಅಧಿಕಾರದ ಪದ್ಧತಿಯನ್ನೇ ಅನುಸರಿಸುತ್ತಿದೆ. ಇಂದು ಸರಕಾರದ ಆಡಳಿತವಲ್ಲಿ ಮುಖ್ಯ ಮಂತ್ರಿಗಳೂ, ಮಂತ್ರಿಗಳೂ ಮತ್ತೆ ಜವಾಬ್ದಾರಿ ಅಧಿಕಾರ ಹೊತ್ತವರೂ ಆದ ಕಾಂಗ್ರೆಸ್ಸಿನವರು ಚುನಾವಣೆಗೆ ಇಳಿದು ರಾಜಕೀಯ ಪ್ರಚಾರ ಮಾಡುವ ಕಾಲಕ್ಕೆ ತಮ್ಮ ಅಧಿಕಾರವನ್ನು ತ್ಯಜಿಸಿಯೋ, ಬೇರೊಬ್ಬರಿಗೆ ಹೊಣ್ಣೀಗೆ ಬರಬೇಕಿತ್ತು. ಹೊರಗಿನ ಪ್ರಾಗರಿಕ ದೇಶಗಳಲ್ಲಿ ಹೀಗೆ ನಡೆಯುತ್ತಾರೆ ಆದರೆ ಹಿಂದೂ ದೇಶದಲ್ಲಿ ಹೀಗೆ ನಡೆಯುತ್ತಿಲ್ಲ. ದೇಶದ ವಿವಿಧ ಪಕ್ಷಗಳು ಎಷ್ಟೇ ಕೂಗಿಕೊಂಡರೂ ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷವು ಕಿವಿಗೊಡುತ್ತಿಲ್ಲ. ನೆಹರೂರವರು ಎಷ್ಟೇ ತೆರೆದ ಹೃದಯದಿಂದ ತಾನು ಕಾಂಗ್ರೆಸ್ ಪ್ರೆಸಿಡೆಂಟಾಗಿ ಪ್ರಚಾರ ಮಾಡುತ್ತಿರುವೆನೆಂದರೂ ಹಿಂದೂದೇಶದ ಮುಖ್ಯ ಮಂತ್ರಿಯೂಗಿಯೂ ಆನರರುವದರಿಂದ ಸಾಮಾನ್ಯ ಜನರ ಮೇಲೆ ಅದರ ಪ್ರಭಾವ ಆಗಿಯೇ ಆಗುತ್ತದೆ ಈ ಚುನಾವಣೆಯು ಕಾಲಕ್ಕೆ ಕಾಂಗ್ರೆಸ್ ಮಂತ್ರಿಗಳೂ, ಇತರ ಅಧಿಕಾರ ಹೊತ್ತವರು ತಮ್ಮ ಜವಾಬ್ದಾರಿಯನ್ನು ಬೇರೆಯವರಿಗೆ ಒಪ್ಪಿಸಿ ಕೇವಲ ಕಾಂಗ್ರೆಸಿಗರಾಗಿ ಪ್ರಚಾರಕ್ಕಿಳಿಯಬೇಕಿತ್ತು. ಬದಲು ಮುಖ್ಯಮಂತ್ರಿಯಾದ ನೆಹರೂರವರೇ ಕಾಂಗ್ರೆಸ್ ಪ್ರೆಸಿಡೆಂಟರೆಂದುಕೊಂಡು ಕಾಂಗ್ರೆಸ್ಸಿಗೆ ಓಟು ಕೊಡಬೇಕೆನ್ನುತ್ತಿದ್ದಾರೆ. ಅದೇ ರೀತಿ ಪ್ರತಿ ಪ್ರಾಂತಗಳಲ್ಲೂ ಮಂತ್ರಿಗಳು ಮಾಡುತ್ತಿದ್ದಾರೆ. ಈ ಕಾರಣದಿಂದ ಮತದಾರರನ್ನು ಸರಕಾರದ ಆಡಳಿತ ಜವಾಬ್ದಾರಿ ಹೊತ್ತ ಮಂತ್ರಿಗಳೇ ಒತ್ತಾಯ ಮಾಡುವಂತಾಗಿದೆ. ಇದೇ ಅಲ್ಲ; ಕಾಂಗ್ರೆಸ್ಸಿನವರು ಇನ್ನೂ ವಿವಿಧ ರೀತಿಯ ಪ್ರಚಾರಕ್ಕೆ ತೊಡಗಿದ್ದಾರೆ. ತಮ್ಮ ಕೈಕೆಳಗಿನ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಕಾಂಗ್ರೆಸ್ಸಿನ ಪ್ರಚಾರ ಮಾಡಲು ಒತ್ತಾಯ ಮಾಡಿದ ನಿದರ್ಶನಗಳಿವೆ. ಓಟಿನ ಕಾಲಕ್ಕೆ ಅಧಿಕಾರ ತನ್ನಲ್ಲಿದೆಯೆಂದು ಚುನಾವಣಾ ಕೇಂದ್ರಗಳಲ್ಲಿ ಅಶೋಕ ಮೆಹತಾರವರು ಎತ್ತಿ ತೋರಿಸಿದಂತೆ ಓಟು ಹಾಕಲು ತಿಳಿಯಲ್ಲದ ಡಬ್ಬಿಗಳನ್ನೂ ಉಪಯೋಗಿಸಿದ ನಿದರ್ಶನಗಳಿವೆ. ಅನೇಕ ಸಂದರ್ಭಗಳಲ್ಲಿ ಅಖಿಲ ಭಾರತ ಬೇಡಿಯೋವನ್ನೂ ಪ್ರಚಾರಕ್ಕೆ ಉಪಯೋಗಿಸಿವೆ. ಆದರೆ ಬೇರೆ ಪಕ್ಷದವರಿಗೆ ಈ ಸೌಕರ್ಯಗಳು ದೊರೆಯಲಾರವು. ಆದ್ದರಿಂದಾಗಿ ಇತರ ಪಕ್ಷಗಳ ಕೆಲಸ ತುಂಬಾ ಕಷ್ಟಕರವಾಗಿದೆ.

ಚುನಾವಣೆಯ ಪ್ರಚಾರದಲ್ಲಿ ಕಾಂಗ್ರೆಸಿಗರು ಅಸತ್ಯ, ಅಧರ್ಮ ವರ್ತನೆಗಳನ್ನು ಕೈಕೊಂಡ ಸಹಸ್ರಾರು ಉದಾಹರಣೆಗಳಿವೆ. ಕೊಡಗಿನ ವಿಚಾರ ಹೇಳುವದಾದರೆ ಕೊಡಗು ಕಾಂಗ್ರೆಸ್ಸು ಅಧಿಕಾರದಲ್ಲಿಲ್ಲದಿದ್ದರೂ ಅದು ಹಲವೆಡೆ ಒಂದು ಪಕ್ಷವು ಸೇರಿಸಿದ ವಿೂಟಿಂಗಿಗೆ ತಾನು ಹೋಗಿ ವಿೂಟಿಂಗನ್ನು ಹಾಳು ಮಾಡಲು ಯತ್ನಿಸಿದೆ. ನೊನ್ನೆ ಶನಿವಾರಸಂತೆಯಲ್ಲಿ ಪ್ರತ್ಯೇಕಪಕ್ಷದವರು ಏರ್ಪಡಿಸಿದ ಸಭೆಗೆ ಕೆಲವು ಕಾಂಗ್ರೆಸಿಗರು ಹೋಗಿ ಭಾಷಣ ಮಾಡಿದ್ದ ಹಾಗೆ ಇಲ್ಲಸಲ್ಲದ ಗಲಭೆ ಎಬ್ಬಿಸಿ ಕಡೆಗೆ ತಾವು ಹೊರ ಹೋಗುವದರೊಂದಿಗೆ ನೆರೆದಿದ್ದ ಜನರನ್ನು ಹೊರಗೆ ಹೋಗಲು ಕೇಳಿಕೊಂಡರು. ಆದಕ್ಕೆ ನೆರೆದ ಜನ ಕದಲಲಿಲ್ಲ. ಇದು ಕಾಂಗ್ರೆಸಿಗರು ಮಾಡುವ ಕೆಲಸವೇ? ಮತ್ತೆ ಕಳೆದ ವಾರದ ಪತ್ರಿಕೆಯಲ್ಲಿ ಮತ್ತೂರು ವಿೂಟಿಂಗಿನಲ್ಲಿ ಕಾಂಗ್ರೆಸಿನವರು ಅನುಸರಿಸಿದ ವರ್ತನೆಯನ್ನು ಪತ್ರಿಕೆಯಲ್ಲಿ ಓದಿರುವೆನು.

ಕೊಡಗಿನ ಕಾಂಗ್ರೆಸ್ ಪಕ್ಷದಲ್ಲಿ ಇಂದಿರ ಮಹಮ್ಮತೀಯರಾದ ಸಂಯೋಜನಾವಾದಿಗಳ ಚರಿತ್ರೆಯನ್ನು ಒಮ್ಮೆ ಆಲೋಚಿಸಿದರೆ ಅವರ ನೀತಿ ಅಂದಿನಿಂದಲೇ ಹೀಗೆ ಎಂದು ತೋರಿ ಬಾರದಿರದು. ಸೆಂಟ್ರಲ್ ಬ್ಯಾಂಕ್ ವಿೂಟಿಂಗುಗಳಲ್ಲಿ ಇವರು ಎಬ್ಬಿಸುತ್ತಿದ್ದ ಕೋಲಾಹಲ ಇಂದು ಅವರು ಅನುಸರಿಸುವ ನೀತಿಯನ್ನೇ ಎತ್ತಿ ತೋರಿಸುತ್ತಿದೆ. ಈ ಪಕ್ಷದವರಿಗೆ ಒಂದು ರಾಜಕೀಯ ನೀತಿ ಇಲ್ಲವೆಂಬುದು ಚೆನ್ನಾಗಿ ತಿಳಿಯುತ್ತದೆ. ಹಿಂದೆ ಕೊಡಗನ್ನು ಬೇರೆ ಪ್ರಾಂತಕ್ಕೆ ಸೇರಿಸಬೇಕೆಂದು ಘೋಷಣೆಯವ ಗಿ ಸಾರುತ್ತಿದ್ದರು. ಆದಕ್ಕಾಗಿಯೇ ಅಪೂರ್ವ ಸಾಹಸಗಳನ್ನ ನಡೆಸಿದರು. ಕಾಲೇಜನ್ನು ವೈಸೂರಿನ ಫಿಲೋವಿನಾ ಕಾಲೇಜಿಗೆ ಕೊಡಬೇಕೆಂದರು. ಕೊಡಗಿನ ಹೈಕೋರ್ಟು ವೈಸೂರಿನಲ್ಲಾಗಬೇಕೆಂದು ವಾದಿಸಿದರು. ವೈಸೂರು ಪ್ರಧಾನಿ ರೆಡ್ಡಿಯವರೊಡನೆ ಚಹಾ ಕೂಟ, ಔತಣಗಳನ್ನು ಮಾಡಿದರು. ಕೆ. ಪಿ ಸಿ. ಸಿಯ ಆಶ್ರಯದಲ್ಲಿ ನಿಂತು ಅಸಾಧ್ಯ ಪ್ರಯತ್ನ ಮಾಡಿದರು. ನಿಜಲಿಂಗಪ್ಪನವರನ್ನು ಮುಂದಿಟ್ಟುಕೊಂಡು ಅನೇಕ ಕಾರಸ್ಥಾನಗಳನ್ನು ಹೂಡಿದರು. ವೈಸೂರಿಗೆ ನೆಹರೂ, ಪಟೇಲರು ಬಂದಿದ್ದಾಗ ಮನವಿ ಮಾಡಿಕೊಂಡರು. ಡೆಲ್ಲಿಗೆ ಹೋಗಿ ಕೊಡಗಿನಲ್ಲಿ ನಮ್ಮ ಜೀವಕ್ಕೇ ಹಾನಿ ಬರುವಂತಿದೆ. ಶೀಘ್ರ ಕೊಡಗನ್ನು ಬೇರೆ ಪ್ರಾಂತಕ್ಕೆ ಸೇರಿಸಿರಿ ಎಂದು ಬೇಡಿದರು. ಪ್ರಯೋಜನವಾಗಲಿಲ್ಲ. ಶಾಂತಿಯು ಆಗರವಾಗಿದ್ದ ಆಡಳಿತ ನಡೆಯುತ್ತಿರುವ ಪ್ರಾಂತವಾದ ಕೊಡಗನ್ನು ಗಲಾಟೆ ಪಡಿಸಲು ಕೇಂದ್ರ ಸರಕಾರವು ಒಪ್ಪಲಿಲ್ಲ.

ಡೆಲ್ಲಿಗೆ ಹೋದ ಶ್ರೀ ಪೂಣಚ್ಚನವರೂ ಕೊಡಗಿನ ವಿಲೀನೀಕರಣಕ್ಕೆ ಸಾಧ್ಯವಾದ ಯತ್ನ ನಡೆಸಿದ್ದಾರೆ. ಆದರೆ 'ಸಿ' ಸಂಸ್ಥಾನಗಳಿಗೆ ಸುಧಾರಣೆ ದೊರೆಯಬೇಕೆಂದು ಡೆಲ್ಲಿಯ ದಿವಂಗತ ದೇಶಬಂಧು ಗುಪ್ತ ನೊದಲಾದವರು ಮಾಡಿದ ಅಚಲ ಪ್ರಯತ್ನದಿಂದ 'ಸಿ' ಪ್ರಾಂತಗಳಿಗೆ ಸುಧಾರಣೆ ದೊರೆಯುವಂತಾಯಿತು. ಕೊಡಗಿಗೆ ಸುಧಾರಣೆ ದೊರೆಯುವದೆಂದು ತಿಳಿದ ಕೊಡಗು ಕಾಂಗ್ರೆಸಿಗರು ಆರ್ಥಾತ್ ಸಂಯೋಜನಾವಾದಿಗಳು ತಮ್ಮ ರಾಜಕೀಯವನ್ನು ಬದಲು ಮಾಡಿದರು ತತ್ಫಲವಾಗಿ ಹಿಂದೆ ಪೂರ್ಣ ಸಂಯೋಜನಾವಾದಿಯಾಗಿದ್ದವರು ಇಂದು ತಾವೂ ಪ್ರತ್ಯೇಕವಾದದ ತಿರುಳಿಸ್ಥೆ. ಹಿಂದೆ ವೈಸೂರಿನ ಸಂಯೋಜನೆಯೂಗಬೇಕೆಂದು ಪ್ರಯತ್ನಪಟ್ಟು ವೈಸೂರಿನಲ್ಲಿ ಮಂತ್ರಿಯೋ ದೊಡ್ಡ ಅಧಿಕಾರಿಯೋ ಆಗಬೇಕೆಂಬುದು ಗುರಿಯಾಗಿದ್ದರೆ ಇಂದು ಕೊಡಗು ವೈಸೂರಿಗೆ ಸೇರುವ ಸಾಧ್ಯತೆ ಇಲ್ಲದುದರಿಂದ ಪ್ರತ್ಯೇಕ ಕೊಡಗಿನಲ್ಲಿ ತಾವೂ ಅಧಿಕಾರಕ್ಕೇರಬೇಕೆಂದು "ನಾವೂ ಪ್ರತ್ಯೇಕವಾದಿ"ಗಳೆನ್ನುತ್ತಿದ್ದಾರೆ. ಇವರದು ಕೇವಲ ಅಧಿಕಾರ ರಾಜಕೀಯವೆಂದು ಬೇರೆ ಹೇಳಬೇಕಾಗಿಲ್ಲ. ಅಧಿಕಾರ ದೊರೆಯದಿದ್ದರೆ ನಾಳೆ ಪುನಹ ಇವರು ವೈಸೂರಿನ ಸಂಯೋಜನೆಯೂಗಬೇಕೆಂದುವಾದಿಸದಿರರು. ಏಕೆಂದರೆ ಈ ಜನರ ರಾಜಕೀಯವು ತತ್ವಗಳ ಮೇಲೆ ನಿಲ್ಲದೆ ಅಧಿಕಾರ, ವ್ಯಕ್ತಿಗಳ ಮೇಲೆ ನಿಂತಿದೆ.

ಕೊಡಗಿನ ಈ ಚುನಾವಣೆಯಲ್ಲಿ ಅವರು ಅನುಸರಿಸುತ್ತಿರುವ ನೀತಿ ಮಾರ್ಗಗಳೇ ಅವಕ್ಕೆ ಸಾಕ್ಷಿ. ಸತ್ಯ ಅಹಿಂಸೆಗಳಿಗೆ ಬದ್ಧವಾದ ಕಾಂಗ್ರೆಸು ಚುನಾವಣಾ ರಂಗದಲ್ಲಿ ಉತ್ತಮ ಆದರ್ಶ, ಉತ್ತಮ ಪ್ರಚಾರದ ಮೂದರಿಯನ್ನು ಜನರ ಮುಂದಿಡುವದರ ಬದಲು ನ್ಯಾಯಬದ್ಧ ವಿೂಟಿಂಗುಗಳನ್ನು ಮುರಿಯುವ, ಇಲ್ಲಸಲ್ಲದ ಅಪಪ್ರಚಾರ, ವ್ಯಕ್ತಿ ದೂಷಣೆ ಮಾಡುವ ಅಡ್ಡ ದಾರಿಯನ್ನು ಹಿಡಿದಿದೆ. ಕಾಂಗ್ರೆಸಿಗರಿಗೆ ಓಟು ಕೊಡದೆ ಬೇರೆ ಜನರಿಗೆ ಕೊಟ್ಟರೆ ಪುರಾತನ ಕಾಲದಲ್ಲಿ ಇದ್ದ "ಬ್ರೀಚ್ ಆಫ್ ಕಂಟ್ರಾಕ್ಟ್" ಪದ್ಧತಿಯನ್ನು ಜಾರಿಯಲ್ಲಿ ತಂದು ನಿಮ್ಮ ನಿರ್ಮೂಲ ಮಾಡುವರೆಂದು ಕಾಂಗ್ರೆಸ್ಸಿನ ಹಿರಿಯ ಮುಂದಾಳುಗಳು ಹರಿಜನ ಕೇರಿಗಳಲ್ಲಿ ಅಪಪ್ರಚಾರ ಮಾಡಿದ್ದಾರೆ. ಹಿಂದೂದೇಶಕ್ಕೆ ಒಂದು ರಾಜ್ಯಘಟನೆ ಇರುವದೆಂಬುದನ್ನೇ ಇವರು ಮರೆತಂತಿದೆ. ಕೆಲವೆಡೆ ಕೋಮುವಾರು ವಾದವನ್ನೂ ಕಾಂಗ್ರೆಸಿಗರು ಹೂಡಿದ್ದಾರೆ. ಕೋಮುವಾರು ಭಾವನೆಯು ಕೊಡಗು ಕಾಂಗ್ರೆಸ್ಸಿನ ಹಲವರಲ್ಲಿ ಇವೆ. ಆದರಂತೆ ಅವರು ಪ್ರಚಾರ ಮಾಡುತ್ತಿದ್ದರೂ ಕಾಂಗ್ರೆಸು ನಷ್ಟನಗೆಯಿಂದ ವರ್ತಿಸುತ್ತಿದೆ. ಏತೆಂದರೆ ಇಂದು ಕೊಡಗು ಕಾಂಗ್ರೆಸಿಗೆ ಬೇಕಿರುವದು ಚುನಾವಣೆಯಲ್ಲಿ ಜಯ; ತತ್ವಗಳಲ್ಲ.

ಸತ್ಯ ಅಹಿಂಸೆಗಳಿಗೆ ಹೆಸರಿಟ್ಟಿದ ಕಾಂಗ್ರೆಸು ಕೊಡಗಿನಲ್ಲಿ ಈ ಸುಳ್ಳು ಮೋಸಗಳ ಕೆಸರಲ್ಲಿ ಬಿದ್ದುದನ್ನು ನೋಡಿ ವ್ಯಥೆಯೂಗುತ್ತದೆ. ತಮಗೆ ಅಪಜಯವಾಗಬಹುದೆಂಬ ಕಾರಣ ವಿರೋಧ ನಿಂತ ಉಮೇದುವಾರರಿಗೆ ನಾನಾ ಆಸೆ ತೋರಿಸಿ ಒಂದೆರಡು ಕಡೆ ಹಣ ಸುರಿದು ದಂಡು ಕೊಟ್ಟು ಜನರಷ್ಟು ಬದಲಾಯಿಸಿದ ಸಂದರ್ಭಗಳಿವೆಯೆಂದೇ ವಾರ್ತೆ ಇದೆ. ಇದು ನಿಜವಾಗಿದ್ದರೆ ಕಾಂಗ್ರೆಸಿನವರು ಮಾಡುವ ಕೆಲಸವಿದಲ್ಲ. ಏಕೆಂದರೆ ಇಂದು ಕಾಂಗ್ರೆಸ್ಸು ಅಧಿಕಾರದಲ್ಲಿರುವದರಿಂದ ಚುನಾವಣೆಯಲ್ಲಿ ಜಯ ಸ್ಥಾಯಿಬದ್ಧವೂ, ನಿರ್ಧಾರಕವೂ ಆಗಿ ನಡೆಯುವಂತೆ ನೋಡುವದು ಕಾಂಗ್ರೆಸಿಗರ ಕರ್ತವ್ಯ ಆದರೆ ಅಧಿಕಾರದ ಮೋಹ ಯಾವ ತತ್ವಸಿದ್ಧಾಂತಗಳಿಗೀಡಾಗಿ ಹಿರಿದು.

ಕೊಡಗಿನಲ್ಲಿ ನಿನ್ನೆಯವರೆಗೆ ಕಾಂಗ್ರೆಸಿಗರನ್ನು ದೋಣಿಕೊಪ್ಪಿಯವರು, ಹಸುಬೆ ಬುಚ್ಚಿದವರೆಂದು ಟೀಕಿಸುತ್ತಿದ್ದವರು ಇಂದು ಕಾಂಗ್ರೆಸ್ ಉಮೇದುವಾರರಾಗಿ ನಿಂತಿದ್ದಾರೆ. ಕಾಂಗ್ರೆಸ್ಸಿನ ಹೆಸರಿನಲ್ಲಿ ಚುನಾವಣೆಗೆ ನಿಂತವರಲ್ಲಿ ಕಾಂಗ್ರೆಸಿನ ಮೂಲ ತತ್ವಗಳನ್ನು ಪಾಲಿಸುವವರಿರಲಿ; ಖಾದಿ ಹಾಕುವವರಾದರೂ ಇರುವದು ಕೇವಲ ಐದಾರು ಜನ. ೨೪ ಉಮೇದುವಾರರಲ್ಲಿ ಉಳಿದವರೆಲ್ಲರೂ ವಿದೇಶೀ ವಸ್ತ್ರಧಾರಿಗಳೆ! ಆದರೂ ಇವರು ಕಾಂಗ್ರೆಸು. ಕೊಡಗಿನ ಕಾಂಗ್ರೆಸ್ ಎಷ್ಟು ಕೆಳತರಗತಿಗಿಳಿದಿದೆಯೆಂದು ಬೇರೆ ಹೇಳಬೇಕಾಗಿಲ್ಲ. ಕಾಂಗ್ರೆಸ್ ತತ್ವ ಬಟ್ಟೆಯಲ್ಲಿಲ್ಲ; ಹೃದಯದಲ್ಲಿದೆಯೆಂದು ಕೆಲವರು ಹೇಳುತ್ತಾರೆ. ಹೌದು, ಮಹಾತ್ಮರ ಪಾವನ ತತ್ವಗಳು ಸ್ವತಂತ್ರ ಭಾರತದಲ್ಲಿ ಹೊರಬಾರದೆ ಒಳಪ್ರಪಂಚದಲ್ಲೇ ಗುಪ್ತವಾಗಿ ಇರಬೇಕಾಗಿ ಬಂದುದು ವಿಷಾದಕರ. ಇಂದಿನ ನಿಸ್ಸೀಮ ಕಾಂಗ್ರೆಸಿಗರು ಅವರಿಗೆ ಕೊಟ್ಟಿರುವ ಸಂಕೇತದಂತೆ ನಿಷ್ಪ್ರಯೋಜಕ. ಕಾಂಗ್ರೆಸಿನವರಿಗೆ ನೊಗ ಏರಿಸಿದ ಎತ್ತುಗಳ ಚಿಪ್ಪೆ ಕೊಡಲ್ಪಟ್ಟಿದೆ. ಹೌದು, ಕಾಂಗ್ರೆಸ್ಸೆಂಬ ಎತ್ತಿಗೆ ಹಿಂದೂದೇಶದ ಸರಕಾರವೆಂಬ ನೊಗ ಕಟ್ಟಿ ಜವಾಬ್ದಾರಿಯನ್ನು ಕೊಟ್ಟಿವು. ಆದರೆ ಅವರು ಹೊಲ ಊಳಲಿಲ್ಲ. ವಿಧಾಯಕವಾಗಿ ಏನನ್ನೂ ಮಾಡಲಿಲ್ಲ. ನೇಗಿಲಿಲ್ಲದ ಎತ್ತುಗಳು ಏನನ್ನು ಉತ್ತಾವು? ಆದರಂತೆ ದಕ್ಷತೆ, ದೃಢಶಕ್ತಿಗಳಿಲ್ಲದ ಕಾಂಗ್ರೆಸ್ಸಿಗರು ಏನನ್ನೂ ಸಾಧಿಸಲಾರರು. ಅವರ ಚುನಾವಣಾ ಚಿಹ್ನೆಯಂತೆಯೇ ಕೊಡಗಿನ ಹಲವು ಉಮೇದುವಾರರೂ ಹೆಸರಿಗೆ ಕಾಂಗ್ರೆಸ್. ಆದರೆ ಕಾಂಗ್ರೆಸ್ ತತ್ವ ಪಾಲಿಸುವವರಲ್ಲ ಆದ್ದರಿಂದ ಕಾಂಗ್ರೆಸ್ಸಿನಿಂದ ಜನಹಿತವೂ ದೇಶೋದ್ಧಾರವೂ ಆಗುತ್ತವೆಂಬುದು ನೇಗಿಲಿಲ್ಲದ ಎತ್ತುಗಳಿಂದ ವ್ಯವಸಾಯ ನಡೆಯುತ್ತದೆಂದು ಆಶಿಸಿದಂತೆ. ಮತದಾರರು ಕೊಡಗಿನ ಕಾಂಗ್ರೆಸಿಗರನ್ನು ಪರಿಶೀಲಿಸಿ ತಿಳಿದು ಮತದಾನ ಮಾಡಲಿ.

॥ ಮತದಾರರಿಗೆ ॥

[ಶ್ರೀ ದೇಶರಾಜರಿಂದ]

(ಹಲವು ತಿಂಗಳುಗಳ ಹಿಂದೆ ಶ್ರೀ. ದೇಶರಾಜರು ಕಳಿಸಿದ್ದ ಮತದಾರರಿಗೆ ಬಿನ್ನಹವೆಂಬ ಈ ಲೇಖನವನ್ನು ನಾನು ಕೃತಜ್ಞಪೂರ್ವಕ ಪುರಸ್ಕರಿಸುತ್ತೇನೆ. ಶ್ರೀ. ದೇಶರಾಜರು ದಿಲ್ಲಿಯಲ್ಲಿಯ ಒಬ್ಬ ಕಾರ್ಯಕರ್ತರು, ಹೆಚ್ಚು ಗದ್ದಲ ಮೂಡದ ಕೆಲಸ ಮಾಡುವವರು. ಸಕಾಲದಲ್ಲಿ ಇದನ್ನು ಪ್ರಸಿದ್ಧಿಸಬೇಕೆಂದು ನಾನು ಇದು ವರೆಗೆ ಇದನ್ನು ಕಾದಿರಿಸಿದ್ದೆನು. (ಕಿ. ಫೆ ವ.)

ನಾನೊಬ್ಬ ಗಾಂಧೀಜಿಯ ವಿನಮ್ರ ಭಕ್ತನು ಯಾವ ಪಕ್ಷಕ್ಕೂ ಸೇರಿದವನಲ್ಲ. ಯಾವದೇ ಪಕ್ಷವು ಅಧಿಕಾರದಲ್ಲಿ ಬಂದರೂ ಬಿದ್ದರೂ ಅಷ್ಟೇ. ಆ ಬಗ್ಗೆ ನಾನು ಕಾಳಜಿ ಮಾಡುವದಿಲ್ಲ. ಆದರೆ ಈ ಗಾಗಲೆ ಪ್ರಾರಂಭವಾಗಿರುವ ಈ ಸಾರ್ವತ್ರಿಕ ಚುನಾವಣೆಗಳಲ್ಲಿ ನಾವು ಸುಸಂಸ್ಕೃತ ಶಾಂತ ಮತ್ತು ಗೌರವಸ್ಥರಂತೆ ವರ್ತಿಸಿ ಯಾರಿಗೂ ಗಾಯವಾಗದಂತೆ ಯಾವ ಮಾನವ ಪ್ರಾಣಿಗೂ ಹಾನಿಯಾಗದಂತೆ ನೋಡಿಕೊಳ್ಳಬೇಕೆಂದು ನನ್ನ ಬಲವಾದ ಬಯಕೆ.

ಚುನಾವಣೆ ಕಾಲವೆಂದರೆ ಒಳ್ಳೆ ಉದ್ವೇಗ ಮತ್ತು ಕ್ಷೋಭೆಯ ಕಾಲ ನಾವು ನಮ್ಮ ವಿಚಾರ ಶಕ್ತಿಯನ್ನು ಕಳೆದುಕೊಳ್ಳದೆ ಒಳ್ಳೆ ಶಾಂತ ರೀತಿಯಿಂದ ಈ ಸಮಯದಲ್ಲಿ ಇರಬೇಕು. ಆಯಾ ಹುರಿಯಾಳುಗಳ ಏಜಂಟರು ಒಳ್ಳೆ ದಕ್ಷತೆಯಿಂದ ಪತ್ರಿಕೆಗಳ ಮುಖಾಂತರ, ಭಾಷಣಗಳಿಂದ ಮತ್ತು ಇನ್ನುಳಿದ ಮಾರ್ಗಗಳಿಂದ ತಿಡಿಗೇಡಿತನವನ್ನು ಮಾಡುವಷುಂಟು. ನಾವಿಷ್ಟೊಂದು ಹೆಮ್ಮೆಯಿಂದ ಹೇಳಿಕೊಳ್ಳುವ ಸ್ವಾತಂತ್ರ್ಯದ ದುರುಪಯೋಗವನ್ನು ನಾವು ಚುನಾವಣೆಯ ಸಮಯದಲ್ಲಿ ಮಾಡುವಷುಂಟು. ಕೆಲ ಸಂದರ್ಭಗಳಲ್ಲಿ ನಾಚಿಕೆಯಿಂದ ಮೋರೆ ಕೆಳಗೆ ಹಾಕುವಷ್ಟು ನಾವು ಸ್ವಚ್ಛಂದ ವೃತ್ತಿಯಿಂದ ನಡೆಯುವೆವು. ವಿವಿಧ ರೀತಿಯಿಂದ ಹಿಂಸೆ ಸಂಭವಿಸುವದು ಕೆಲವು ಹುರಿಯಾಳುಗಳು ರೊಕ್ಕ ಕೊಟ್ಟು ನೇಮಿಸಿಕೊಂಡ ಏಜಂಟರು ಈ ಹಿಂಸೆಗೆ ಹೊಣೆಗಾರರಾಗಿರಬಹುದು. ಆದರೆ ಪ್ರತ್ಯಕ್ಷ ಹಿಂಸಾಚರಣೆ ನಡೆದಾಗ ಇವರೆಲ್ಲಿಯೋ ಮಾಯವಾಗಿಬಿಡುವರು.

ನಮ್ಮ ದೇಶವಿಂದು ಗಣರಾಜ್ಯವಾಗಿದೆ. ನಾವಿನ್ನೂ ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಹೆಣಗಬೇಕಾಗಿದ್ದರೂ ರಾಜಕೀಯ ದೃಷ್ಟಿಯಿಂದ ನಾವು ಸಂಪೂರ್ಣ ಸ್ವತಂತ್ರರಾಗಿದ್ದೇವೆ. ಮತಾಧಿಕಾರವು ನಮಗೆಲ್ಲರಿಗೂ ದೊರೆತಿದೆ. ಈ ಅಧಿಕಾರವನ್ನು ಒಳ್ಳೆ ದಕ್ಷತೆಯಿಂದ ನಮ್ಮ ಪೂರ್ಣ ವಿಚಾರ ನೂಡಿ ಉಪಯೋಗಿಸಿದ್ದಾದರೆ ಅದೇನು ಕಡಿಮೆ ದರ್ಜೆಯ ಅಧಿಕಾರವಾಗದು. ಯಾವದೊಂದು ಪಕ್ಷದ ಹುರಿಯಾಳುವಿಗೆ ಮತಹಾಕಲು ನಾವು ಸ್ವತಂತ್ರರು. ಮತಾಧಿಕಾರವು ಅತ್ಯಂತ ಪವಿತ್ರವಾದ ಸೊತ್ತು, ಭಿಡೆ, ಮುರವತ, ಹಣ ಮೊದಲಾದ ಯಾವದೇ ಬಗೆಯ ಅವಿಷಕ್ಕೆ ನಾವು ಬಲಿಬೀಳೋಣ ಬೇಡ. ನಾವು ಇವುಗಳಿಗೆ ಮನಸೋತದ್ದಾದರೆ ಪರಮಾತ್ಮನಿಗೆ ದ್ರೋಹ ಬಗೆದಂತಾಗುವದಲ್ಲದೆ ಸಮಾಜದ್ರೋಹದ ಪಾಪಕ್ಕೂ ಗುರಿಯಾಗುವೆವು. ನಾವು ನಮ್ಮ ಸದಸದ್ವಿವೇಕ ಬುದ್ಧಿಯನ್ನು ಸ್ಮರಿಸಿ ಅತ್ಯಂತ ಪ್ರಾಮಾಣಿಕತೆಯಿಂದ ಮತ್ತು ನ್ಯಾಯಬುದ್ಧಿಯಿಂದ ಪ್ರೇರಿತರಾಗಿ ಈ ಕರ್ತವ್ಯವನ್ನು ಮಾಡುವಾ. ಎರಡನೆಯವರು ಹೇಳಿದ್ದನ್ನು ಕೇಳಬಹುದು, ಕೇಳದಿರಬಹುದು. ಆದರೆ ಯಾರ ಪ್ರಚಾರಕ್ಕೂ ಬಲಿಬೀಳುವದು ಬೇಡ. ನಾವೇ ವಿಚಾರ ಮಾಡಿ ನಮ್ಮ ಹಿತಸಂಬಂಧಗಳು ಯಾವ ಪಕ್ಷಗಳಿಂದ ರಕ್ಷಿಸಲ್ಪಡುವವೆಂದೆನಿಸುವದೋ ಆ ಪಕ್ಷಕ್ಕೆ ಮತ ಹಾಕುವಾ. ಪ್ರತಿ ಐದು ವರ್ಷಗಳಿಗೊಮ್ಮೆ ನಾವೀ ಅಧಿಕಾರವನ್ನು ಉಪಯೋಗಿಸುತ್ತೇವೆ. ಅದುದರಿಂದ ಅತ್ಯಂತ ದಕ್ಷತೆಯಿಂದ ಈ ಕಾರ್ಯವನ್ನು ಮಾಡುವಾ. ಮತಗಟ್ಟಿಗೆ ಯಾರಾದರೂ ಕರೆದುಕೊಂಡು ಹೋಗಬೇಕೆಂಬ ದಾರಿಯನ್ನು ನೋಡದೆ ನಾವು ಸ್ವತಃ ನಡೆಯುತ್ತಾಗಲಿ ನಮ್ಮ ವೆಚ್ಚದಿಂದಾಗಲಿ ಅಲ್ಲಿಯವರೆಗೆ ಹೋಗತಕ್ಕದ್ದು. ಹುರಿಯಾಳುಗಳ ಏಜಂಟರು ಕೊಡುವ ತಿಂಡಿತಿನಿಸು ಊಟವನ್ನು ಪೇಯಗಳನ್ನು ತೆಗೆದುಕೊಳ್ಳದೆ ಅದಿಲ್ಲದವರ ವ್ಯವಸ್ಥೆಯನ್ನು ನಾವೇ ಮಾಡಿಕೊಳ್ಳತಕ್ಕದ್ದು. ಮತಪ್ರದಾನ ಮಾಡುವದೆಂದರೆ ನಮಗಾಗಿ ಮತ್ತು ನಮ್ಮ ದೇಶಕ್ಕಾಗಿ ಮಾಡುವ ಕರ್ತವ್ಯವಾಗಿದೆ. ಮತಹಕ್ಕುವದೆಂದರೆ ಯಾವನೊಬ್ಬ ಹುರಿಯಾಳುವಿಗೆ ದೊಡ್ಡ ಉಪಕಾರ ಮಾಡಿದಂತಲ್ಲ.

ಸ್ಪರ್ಧಿಸುವ ಹುರಿಯಾಳುಗಳ ಪಲುವಾಗಿ ನಾವ್ಯಾ ಯಾರೊಬ್ಬರನ್ನು ಬಯ್ಯುವದಾಗಲಿ ಅವರೊಡನೆ ಜಗಳಾಡುವುದಾಗಲಿ ಮೂರ್ಖತನದ್ದು. ಈ ಹುರಿಯಾಳುಗಳು ಪರಸ್ಪರ ಭೆಟ್ಟಿಯಾಗಿ ಮಿತ್ರರಂತೆ ನಡೆಯುವರೆಂದೂ ಅವರ ಪಲುವಾಗಿ ನಾವು ಹುಚ್ಚರಂತೆ ಬಡೆದಾಡಿ ತಲೆ ಒಡೆದುಕೊಳ್ಳುತ್ತೇವೆಂದೂ ರಾಜಕೀಯದಲ್ಲಿ ಅಜ್ಞೊಂದು ಜ್ಞಾನವಿಲ್ಲದ ಬಂಧುಗಳನ್ನು ದ್ವೇಷಿಸಿ ನಾನು ಹೇಳಬಯಸುತ್ತೇನೆ. ಇದೆಂಥ ನಾಚಿಕೇಡು! ಮತಗಟ್ಟಿಗಳ ವ್ಯವಸ್ಥೆಗಾಗಿ ಇರುವ ಅಧಿಕಾರಿಗಳನ್ನೂ ನಾವು ತೊಂದರೆಗೀಡು ಮಾಡದಂತೆ ಜೋಡ ಎಲ್ಲರಿಗೂ ಸಮಾನವಕಾಶ ಕೊಡಲಾಗುವದೆಂದು ಸರಕಾರದವರು ಆಶ್ವಾಸಿಸಿದ್ದಾರೆ. ಯಾರಾದರೂ ಈ ವಚನವನ್ನು ಮುರಿಯುವವರು ಕಂಡು ಬಂದರೆ ಮೇಲಧಿಕಾರಿಗಳಿಗೆ ಅದನ್ನು ತಿಳಿಸತಕ್ಕದ್ದು. ಕಾಯದೆಯನ್ನು ನಾವೇ ನಮ್ಮ ಕೈಯಲ್ಲಿ ತೆಗೆದುಕೊಂಡರೆ ಪರಿಣಾಮವು ಎಲ್ಲರಿಗೂ ಘಾತಕವಾಗುವದು. ಯಾವ ದೊಂದು ಸ್ಥಳದಲ್ಲಿ ಕಿಡಿಗೇಡಿತನವು ಮತ್ತೆ ಮತ್ತೆ ನಡೆದರೆ ನಾವು ಅದರಲ್ಲಿ ಭಾಗವಹಿಸುವುದು ಬೇಡ. ಅದರಿಂದ ದೂರ ಸರಿಯುವಾ. ಆಗದೆ ಅದು ಅಲ್ಲಿಯೇ ಮುಕ್ತಾಯವಾಗದರ ಸಂದೇಹವಿಲ್ಲ.

ಇಂಥ ಒಬ್ಬ ಹುರಿಯಾಳುವಿಗೇ ಮತಹಾಕಿದರೂ ಹಳ್ಳಿಯಾರಿಗೇ ಮತಹಾಕಿದರೂ ಹಳ್ಳಿಯಾರಿಂದ ಯಾರಿಗೂ ಯಾರೂ ಒಜನರಿಲ್ಲ ಕೂಡಿಕೊಂಡೇ ಮತಗಟ್ಟಿಗಳಿಗೆ ಹೋದರೆ ಅದೆಷ್ಟು ಮನೋಹರ ದೃಶ್ಯವನ್ನು ನೋಡುವ ಸೌಭಾಗ್ಯವೊದಗುವದು? ಈ ಬಗ್ಗೆ ಯಾವದೇ ಬಗೆಯು ಕಲಹ ಬೇಡ. ಬೇರೆ ಬೇರೆ ಆಟಗಳನ್ನು ನಾವು ಆಡಿಕೊಳ್ಳುವದಿಲ್ಲವೆ? ನಾವು ಪೂಜಿಸುವ ದೇವರೂ ಬೇರೆ ಬೇರೆಯಿಲ್ಲವೇ? ತಿನ್ನುವ ಆಹಾರದಲ್ಲಿಯೂ ಭೇದವಿಲ್ಲವೆ? ಚುನಾವಣೆಯ ಕಾಲದಲ್ಲಿ ಬೇರೆ ಬೇರೆ ಹುರಿಯಾಳುಗಳನ್ನು ಆರಿಸಿಕೊಂಡಿದ್ದರೇನಾಯಿತು? ಆ ಬಗ್ಗೆ ನಾವು ಅತ್ಯಂತ ಕಾಳ್ಜೆಯಿಂದ ಇರಬೇಕು. ಅಂದರೆ ನವ್ಯ ರಾಷ್ಟ್ರವು ನಿಜವಾದ ಪ್ರಜಾ ಪ್ರಭುತ್ವ ಗಣರಾಜ್ಯವೆನಿಸುವದು.

—

ಪ್ರತ್ಯೇಕ ಪಕ್ಷದ ಗುರಿ.

ಪ್ರತ್ಯೇಕ ಪಕ್ಷದ ತಕ್ಕಡಿ ಚಿಹ್ನೆಗೆ ಮರೆಯದೆ ಸರ್ವರು ಓಟು ಕೊಡಿ
ಕೊಡಗನು ಮೂರಲು ಹೊರಪಟ್ಟರುವರ ಹರಾಸು ತನ್ನವನು ನಿಲಿಸಿಬಿಡಿ
ದೇಶದ ಖ್ಯಾತಿಗೆ ದೋಷವ ಬಗೆದಿಹ ಅಸೆಯು ಜನರನು ಹೊರದೂಡಿ
ಪ್ರತ್ಯೇಕ ಪಕ್ಷಕೆ ಮತವನ್ನೀಯುತ ಕೊಡಗಿನ ಹಿರಿಮೆಯನುಳಿಸಿಕೊಡಿ

ದೀನದಳಿತರಾ ದುಡ್ಡಿನ ದುಂದು ವ್ಯಯವನು ತಡೆದಿರಿಸಿ
ನೇಗಿಲಯೋಗಿಯ ತಲೆಯನ್ನೇರಿದ ಸಾಲದ ಹೊರೆಯನು ಕೆಳಗಿಳಿಸಿ
ಕೃಷಿಕರ, ಶ್ರಮಿಕರ, ದಾತದರಿದ್ರರ ಬೆನ್ನೆಲುಬುಗಳನು ಬಲಗೊಳಿಸಿ
ದುಡಿಯಲು ನಿಂತಿರುವ ಪ್ರತ್ಯೇಕ ಪಕ್ಷಕೆ ಮತವನ್ನೀಯುತ ಮನೆಯುಳಿಸಿ

ಸ್ವರಾಜ್ಯ ಬಂದರು ಸುರಾಜ್ಯವಾಗದೆ ದುರಾಜ್ಯವಾಯ್ತೆನ್ನ ನವುಗೆಂದು
ದುರಾಜ್ಯ ನಾಶಿಸಿ ಸುರಾಜ್ಯ ಸಾಧಿಸೆ ಪಣ ತೊಟ್ಟರುವೆವು ನಾವಿಂದು
ಕಾವೇರಿ ಮಾತೆಯ ಕೊಡಗಿನ ಜನಗಳ ನಿನ್ಮಯ ಸೇವೆಯ ನಮ್ಮ ಗುರಿ
ಕೊಡಗಿನ ಸರ್ವರ ಹಿತ ಸಾಧಿಸುವದೆ ಪ್ರತ್ಯೇಕ ಪಕ್ಷದ ಹಿರಿಯ ಗುರಿ

ಬೆಳಗುವ ಗಾಂಧೀ ಟೊಪ್ಪಿಯ ಹೆಸರಲಿ ದೇಶವನಳಿಸುವ ಜನರನ್ನ
ಗಾಂಧಿ ಮಹಾತ್ಮನ ಸರ್ವೋದಯವನು ಮುರಿತು ನಿಂತಿಹ ಮೂಳರನು
ದೀನರ ನೆತ್ತರ ಹೀರಿಯೆ ಕೊಬ್ಬಿದ 'ಕಾಂಗ್ರೆಸ್' ಕ್ರೂರರನು
ಗದ್ದುಗೆ ಇಳಿಸಿ ದೇಶದ ಹಿತಕೆ ಎರವಾಗಿಹ ಈ ಸಭ್ಯರನು

ಕೃಷಿ ಕೈಗಾರಿಕೆ ಉದ್ಯೋಗೋನ್ನತಿ ಸರ್ವ ಸುಧಾರಣೆ ಸಾಧಿಪುದು
ಬಲು ಕೀಳಾಗಿಹ ಕೃಷಿಕರ ಶ್ರಮಿಕರ ಬಾಳನ ಮಟ್ಟವನ್ನೇರಿಪುದು
ಬಲು ಮೇಲಾಗಿಹ ಧನಿಕರ ವೈಭವ ದುಂದು ವ್ಯಯಂಗಳನಿಳಿಸುವದು
ಹರಿಜನರಾದಿ ನಿವಾಸಿಗಳಾದಿಯು ತಡಮಾಡದೆ ಮೇಲೆತ್ತುವದು

ರಾಷ್ಟ್ರದ ಜನತೆಗೆ ಹಿತಕರವೆನಿಸಿದ ಶಿಕ್ಷಣ ಕ್ರಮವನ್ನನುಸರಿಸುವುದು
ರಾಷ್ಟ್ರದ ಸಂಪದ ಹೆಚ್ಚುವ ತೆರದಲಿ ಗುಡಿಕೈಗಾರಿಕೆ ತೆರೆಯುವದು
ಮೂಕಿನ ಮಲ್ಲರ ಮನೆಯೊಳಗೋಡಿಸಿ ಕೃತಿಗಳ ಮೂಲಕ ತೋರುವದು
ಜಾತ್ಯಾತೀತವೂ ವರ್ಗರಹಿತವೂ ಆದ ಸಮಾಜವ ಕಟ್ಟುವದು

ಗಾಂಧಿ ಮಹಾತ್ಮನು ತೋರಿದ ದಾರಿಯ ತ್ರಿಕರಣ ಪೂರ್ವಕ ನಡೆಯುವದು
ಹಿಂಸಾವಿರಹಿತ ಕ್ರಾಂತಿಯು ಮೂಲಕ ಸರ್ವೋದಯವು ಸಂಸ್ಥಾಪಿಪುದು
ಸಾರಿದ ಸಿದ್ಧಾಂತಗಳನ್ನೆಲ್ಲವ ಕಾರ್ಯದ ರಂಗಕ್ಕಿಳಿಸುವದು
ಕೊಡಗಿನ ನಾಡಿನ ಪ್ರತ್ಯೇಕ ಪಕ್ಷದ ಸಿದ್ಧಾಂತಗಳ ಸಾರವಿದು

ಜನತಾ ಸೇವೆಯೆ ನವ್ಯಾ ಗುರಿಯೆನ್ನುವದನು ತೋರುವೆವು
ಜನತೆಯು ಬೆಂಬಲವಿದ್ದರೆ ಮಾತ್ರವೆ ಶಾಸನ ಸೂತ್ರವ ವಹಿಸುವೆವು
ಸಾರಿದ ಭರವಸೆ ನಡೆಸಲಾರದೊಡೆ ಶಾಸನ ಸೂತ್ರವ ತ್ಯಜಿಸುವೆವು
ಭಾರತ ಭಾಗ್ಯವಿಧಾತನ ಹೆಸರಲಿ ನಾವೀ ಪಣ ಕೈಕೊಳ್ಳುವೆವು

— ಪ್ರತ್ಯೇಕವಾದಿ